ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

NESARU TINGALOLE Vol XVIII - 4 ಏಪ್ರಿಲ್ 2001

ಈ ಸಂಚಿಕೆಯಲ್ಲಿ

OH, MYSORE !	• V.K. Shastry	2
ವಿ.ಸ. ಖಾಂಡೇಕರ	• ಡಾ|| ಜಿ.ಎಸ್. ಕಾಪಸೆ	4
ಜೂನ್ ಎಂಟು	• ಮೂಲ ಮರಾಠಿ: ವಿ.ಸ. ಖಾಂಡೇಕರ ಅನು: ಅನಿಕೇತನ	8
ಕವನ :		
ದಾಂಗುಡಿಯ ನೀನಾಗು	• ಬಿ.ಬಿ. ಜೇವೂರೆ, ನೀಲಮ್‌ನಗರ್.	13
ವಸಂತಕಾದೊಲುಮೆ	• ಅನುವಾದ: ಬಿ.ಎಂ.ಶ್ರೀ	13
ಪ್ರಾರ್ಥನೆ	• ಅನುವಾದ: ಬಿ.ಎಂ.ಶ್ರೀ	13
ಯುಗಾದಿಯ ಹಾರ್ದಿಕ ಶುಭಾಶಯಗಳು	• ಸೀತಮ್ಮ ಆ.ರ.	13
ಸುತ್ತ-ಮುತ್ತ		15

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

OH, MYSORE !

-- V.K. Shastry

"A typical Mysorean is one who is modest, cultured, contended and also homebound" said a gentleman from north India with a nostalgic look. He had served for a long time in old Mysore state and now settled in Delhi after retirement. He was partly correct. For these qualifications we should also add "loyal to the maharaja and the ruling family, and courtly in his manners".

This loyalty was ingrained not merely in the people of Mysore city but throughout the state. I should recall here an interesting incident of my student days.

Some of us, who were attending a Scout camp near a dam in an interior part of Hassan district, decided to take a stroll around the countryside. Nearing noon, as it was hot, we though of spending some time under the shade of a nearby tamarind tree. We found that there was already a shepherd there with ferocious looking dogs on his side which growled at our approach. Ignoring the dogs we sat and started chatting about this and that and after a while it turned towards the subject of the maharaja.

KRISHNARAJA'S REIGN

Those were the days of the freedom movement and we had all been infected with the spirit. And progressive in views we felt that the maharaja was an anachronism and discussed about him light heartedly. Suddenly the shepherd turned towards us and barked, "Stop that nonsense otherwise... " It was a threatening look and we felt that if we persisted he would not hesitate to set the dogs upon us and quietly we moved out of the place.

In his verses titled "Nimmooravudu Mysooru" B.M. Sri (B.M. Srikantaiah) was eulogized the glory and charm of Mysore that is the Mysore of Nalvadi Krishna – Krishnaraja Wodeyar the IV. We may say, these verses evoke a picture of old Mysore.

During the reign of the fourth Krishnaraja, spanning the first four decades of this century, the state reached its peak of glory. Notwithstanding the first world war it was comparatively peaceful reign which enabled the state to make all-round progress.

Mysore city, as the seat of the maharaja was naturally the focus of all attention even though the bigger Bangalore city was the centre of administration. The residence of maharaja, that is the place, was not viewed as a mere centre of power. It had also a sacred aura around it. It was viewed as the embodiment of the noblest traditions of Vijayanagar and more or less the soul of the state itself.

Life in he city involved around the palace which provided employment for a large number of people. They ranged from those haughty bhakshis, who were in attendance upon the maharaja to the 'hale paikadavaru', that is a group whose function seemed to be just to grow a ferocious-looking mutton chop moustache and march in the royal processions during the birthday and Dasara celebrations.

In between were employees of various functions, chopdars, guards, officials, musicians, courtiers etc. and a host of other whose function perhaps seemed to be to provide number and body to the royal cavalcade.

The place was a huge edifice with so many rooms, corridors etc., that it required almost a brigade of guards. Most of them dressed in white long coats, trousers and red turban seemed to merge with the surroundings.

The turbans, long coat and trousers were a part of the life of the city, whose moods and manners were being influenced by the palace etiquette itself. There were variations of this dress too, indicating the status, function etc. of the person, from a haughty civil servant to a minor functionary.

The minor functionary was dressed in a long coat and trousers with or without crease and a turban with or without lace, and more often walked barefoot. At the other end was the senior official with usually black long coat, white trousers, shoes and the famous Mysore lace turban adorning his head.

The difference between the two was that while the minor functionary and people were required to wear a 'cummerband' tied to the waist, the officials wore an 'uttariya' across the shoulder. In between were the coloured turbans of the members of the Arasu families, or turbans of shawl adorning the Vedic scholars.

It was considered as bad manners to move about bare headed and even beggars used to tie a cloth around their heads like a turban. They were not sure when the 'savvari' (maharaja) would pass that way. A whole essay could be written about this subject.

Coming to the word 'savvari', it was a part of a vocabulary evolved in the surroundings of the place as a part of the Durbari culture. In Mysore city one could hear words like mahaswami, huzur, savvari, appane, buddi etc. which we, the professed progressive termed as a product of 'cummerband' culture. And regarding the word 'buddi' I must make a slight digression here.

DRESS ON HIRE

Some years back I visited a friend and his family. I found Mrs. Chikkammanni Devaraj Urs in their company. While taking about various subjects I cam to Mr. Devaraj Urs who was the chief minister then. While referring to him I used to the word 'arasinavaru'. But each time Mrs. Chikkammanni intervened to correct me to saying 'buddiyavaru'.

This word was mandatory in addressing all members of the Arasu families irrespective of their place in the order of precedence in the palace.

Thus a sort of Durbari culture pervaded Mysore city that even people unconnected with the palace used to sport this dress treating it as a fashion. But this dress was compulsory for anyone who even entered the palace on any work. This acquired greater importance during the state functions like the Dasara festivities, on the maharaja's birthday celebrations when the maharaja held a durbar.

Invitees and visitors to the durbar had to wear the durbar dress. Especially during the Dasara festivities when there was an influx of visitors from the neighbouring states, there was s shortage of durbar dresses. But crafty tailors stitched this dress in ordinary cloth and had them ready. The turban was shaped in pith and covered by a single layer of white cloth on which was pasted a lace-looking ribbon. And the whole set was given on hire at high rates to the visitors who paid premium for the 'passes' to the durbar.

After the durbar they turned proudly sporting the 'khasa hara'. Even after returning the hired dress, they would carry the 'khasa hara' with them.

What is the 'khasa hara'. It is a garland of a single strand of jasmine flowers dipped in 'panneer' or rose water. After the durbar every visitor was garlanded with this 'khasa hara'. The visitors, especially from Tamil Nadu, seemed to be very happy and proud with the 'khasa hara'. And they seemed to

be more loyal to the maharaja than this subjects themselves.

Notwithstanding the presence of the maharaja the life of Mysore city moved at a slow stately pace. There were few motor cars and more of 'Shahpasand Tongas'. There were also clipclopping Victorias carrying the Arasu dignitaries and also closed carriages carrying their ladies in ghosha".

Pollution of any sort was either unknown or within limits. The city was clean with broad roads, possibly influenced by the palace itself which was spic and span and awe inspiring by its gold and glitter, silence and perfume of agarbattis.

With the perfumed atmosphere of the palace pervading the city it was natural there were a large number of connoisseurs 'rasikas' and epicureans. The atmosphere seems to have been thick with music. And dance, if any was in a low key. During the administration of the puritan Diwan, Sir K. Seshadri Iyer dance and dancers were banished from the temples. As a consequence this art received a setback and lost its popularity. But music reigned supreme. Perhaps Mysore is the only city where many streets have been named after musicians like Tyagaraja Kshetrajna, Seshanna etc.

The maharaja had some of the outstanding musicians in his durbar and added some more from different parts of India on something like a retainer basis. As a consequence a Mysorean had to taste of music even from birth and thanks to the raja it was free. Music recitals by celebrities was a part of any function in the palace and many more were arranged during the course of the year. Sound amplifiers were fixed at different gates of the palace so that people could listen to the concerts. Besides the palace, music was a part of most of the celebrations like Ramanavami or Krishnashtami and recitals of eminent masters were held in different parts of the city in temples or in pandals.

These occasions apart, most of the vidwans conducted weekly bhajan sessions at their homes where the best of music could be heard. With so much music, all provided free, it was said Mysoreans were subjects of a joke, as those who would not pay for listening to music. In fact it was rumoured that when Bidaram Krishnappa started the Ramanavami music series in the Prasanna Sitarama Mandiram and should tickets priced to eight annas (now 60 paise) each, some 'rasikas' were unhappy that he was selling music.

A recital before the maharaja was a cherished object of most musicians in the country. It was an interesting experience in itself. The recital started generally at 7.30 p.m. Five minutes before all the vidwans of the palace, other dignitaries etc., assembled and seated. A minute before 7.30 p.m. heralds announced the arrival of the maharaja. Immediately the maharaja was seated and the Bakshi signalled for the commencement of the concert.

The maharaja himself being a connoisseur, the musician was naturally eager to learn about his reaction. But nothing would be visible on the raja's face. But there was another yardstick which most musicians were unaware of.

The recital was usually of one hour's duration. If the maharaja sat for more than half an hour, it was an indication that he was pleased. If it was for half an hour, it was passable, if it was less than half an hour, it indicated the failure of the recital. But sometimes the maharaja was so pleased that this time limit was exceeded as in the case of

Subramanya Iyer and Chintalapalli Venkata Rao when he sat for nearly 100 minutes. These were rare occasions.

STALWARTS

'Rasikas' of that generations were privileged to hear the music of such stalwarts as Fayyaz Khan, Vilayat Hussain Khan, Indubala, Barakatullah Khan, Seshanna, Krishnappa, Vasudevachar, Dwaram Venkataswamy Naidu. Muthiah Bhagavatar, and all the other vidwans of Mysore and many more from the neighbouring states. There was a surfeit of music with the result an average 'rasika' developed such good taste and so sell informed it was difficult to please him.

Good taste in music naturally spilled over to other areas like food, perfume and other good things in life. Mysore has been

(continued Page 14)

PROGRAMME

April 2001

On Tuesday 10th April 2001
A review of the book
Veena - The Instrument Par Excellence
by
Vidwan Shri C.K.Shankamarayan Rao.
Speakers: **Shri T.N. Ashok**
Carnatic Music Incharge, AIR, Mumbai.
Smt. Jayashree Arvind
A renowed Veena Exponent
Chief Guest: **Shri K.P. Rama Murthy** I.P.S.
Director of Kannada & Culture
Govt. of Karnataka
Followed by Veena Concert by
Smt Jayshree Arvind & Party
Time: 7.00 p.m. Date: 10th April 2001
Venue: Mysore Association

On Tuesday 26th April 2001
Akshaya Trithiya
Mahaganapathi Pooja
On the auspicious of Akshaya Trithiya Mahaganapathi Pooja has been arranged at the association on 26th April 2001.
Programme is as under:
5.00 p.m. Ganapathi Pooja & Ganapathi Homa
6.00 p.m. Navagraha Pooja & Navagraha Homa.
7.00 p.m. Poornahuthi Naivedyam
8.00 Maha Mangalarthi
Mantra pushpam
8-30 p.m. Prasad Viniyoga
Members wishing to offer 'Sevartha' should give their name and other details to the office.

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For
INDIAN AIRLINES &
JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

ವಿ.ಸ. ಖಾಂಡೇಕರ

✍ ಡಾ|| ಜಿ.ಎಸ್. ಕಾಪಸೆ

ಮರಾಠಿಯ ಪ್ರಪ್ರಥಮ ಜ್ಞಾನಪೀಠ ವಿಜೇತರಾದ ಶ್ರೀ ವಿ.ಸ. ಖಾಂಡೇಕರರ ಬದುಕು ಕಾದಂಬರಿಗೆ ವಸ್ತುವಾಗುವಂತಹದು. ಆದರೆ ಅದು ರಮ್ಯ ಅಥವಾ ರೋಮ್ಯಾಂಟಿಕ್ ಕಾದಂಬರಿಯಾಗದೆ, ಅನಾಥ ಪ್ರಜ್ಞೆಯ ಅಸಹಾಯಕ ಸ್ಥಿತಿಯನ್ನು ಎದುರಿಸಿ, ತನ್ನನ್ನು ತಾನೇ ರೂಪಿಸಿಕೊಂಡ ನಾಯಕನೊಬ್ಬನ ಒಂದು ಸಾಹಸದ ಕಥೆಯಾಗುತ್ತದೆ. ಇಂದಲ್ಲ ನಾಳೆ ಯಾರಾದರೂ ಅದನ್ನು ಬರೆದಾರು.

ಈ ಶತಮಾನದ ಪ್ರಾರಂಭದಲ್ಲಿ ಮರಾಠಿ ಸಾಹಿತ್ಯ ಹೊಸ ಮನ್ವಂತರವನ್ನು ಪಡೆಯಲು ಯತ್ನಿಸುತ್ತಿರುವ ಒಂದು ಸಂಕ್ರಮಣ ಕಾಲದಲ್ಲಿ ವಿ.ಸ. ಖಾಂಡೇಕರರು ವಿದ್ಯಾರ್ಥಿಯಾಗಿ, ಯುವಕರಾಗಿ ಸಾಹಿತ್ಯಾಧ್ಯಯನದಲ್ಲಿ ಹಾಗೆಯೇ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಕೊಳ್ಳುತ್ತಾರೆ. ಮರಾಠಿಯಲ್ಲಿ ಕಿರ್ಲೋಸ್ಕರ ಕೋಲ್ಹಟಕರ-ದೇವಲ-ಇವರ ನಾಟಕ ಪ್ರದರ್ಶನಗಳು ಭರದಿಂದ ನಡೆಯುತ್ತಿರುವ ಆ ಸಂದರ್ಭದಲ್ಲಿ ಖಾಂಡೇಕರರ ಎಳೆತನದಲ್ಲಿ ನಾಟಕಗಳು ಕುತೂಹಲವನ್ನು ಕೆರಳಿಸಿದ್ದವು. ಶಾಲಾ ಬಾಲಕನಾಗಿದ್ದ ಗಣೇಶ ಆತ್ಮಾರಾಮ ಖಾಂಡೇಕರ ನಾಟಕದ ಪಾತ್ರಗಳನ್ನು ಅನುಕರಿಸುತ್ತ ತಾನೂ ನಾಟಕ ರಚಿಸಲು ಯತ್ನಿಸಿದ್ದು ಈಗ ಕಥೆಯಾಗಿರುವ ವಿಷಯ. ಮನೆಯಲ್ಲಿ ಅರ್ಧಾಂಗವಾಯು ಪೀಡಿತ ತಂದೆ, ಬಡತನದ ಸ್ಥಿತಿ, ಎಲ್ಲ ವೈಪರೀತ್ಯಗಳಲ್ಲಿಯೂ ಓದುವ ಗೀಳು ಗಣೇಶನಿಗೆ. ಶಾಲೆಯಲ್ಲಿ ಬುದ್ಧಿವಂತ ಹುಡುಗ, ಶಿಷ್ಯ ವೇತನ ಪಡೆದ ವಿದ್ಯಾರ್ಥಿ. ಇನ್ನೂ ಮಾಧ್ಯಮಿಕ ಶಿಕ್ಷಣ ಮುಗಿದಿರಲಿಲ್ಲ. ತಂದೆಯನ್ನು ಕಳೆದುಕೊಂಡರು. ಅಲ್ಲಿಂದ ಬದುಕಿನೊಂದಿಗೆ ಹೋರಾಟ ಮಾಡಬೇಕಾಯಿತು.

ಖಾಂಡೇಕರರು ಜನಿಸಿದ್ದು 1898ರ ಜನವರಿ ಜನವರಿ 13ರಂದು, ಸಾಂಗಲಿಯಲ್ಲಿ. ಒಂದು ಪುಟ್ಟ ಸಂಸ್ಥಾನದ ರಾಜಧಾನಿಯಾಗಿದ್ದ ಆ ಊರು ಕೃಷ್ಣಾ ನದಿಯನ್ನು ಬಳಸಿಕೊಂಡು ಬೆಳೆದಿದೆ. ಜಿಡ್ಡುಗಟ್ಟಿದ ಸಂಪ್ರದಾಯವಾದಿ ಆ ನಗರಕ್ಕೆ ಕೃಷ್ಣಾನದಿ ಕೃಷ್ಣಾಮಾಯಿ ಆಗಿದ್ದರೂ ಕಾಲ ಬದಲಾದಂತೆ ಸುಧಾರಕತೆಯ ಹೊಸ ನೀರನ್ನು ಅಲ್ಲಿ ಹರಿಸಿದೆಯೆಂದು ಹೇಳಬೇಕು. ಕೃಷ್ಣಾ-ಖಾಂಡೇಕರ ಆಕರ್ಷಣೆಯ ಒಂದು ಪ್ರವಾಹ. ಆ ನದಿಯಲ್ಲಿ ಈಜುವುದು ಅವರಿಗೆ ಪ್ರಿಯವಾದ, ಉಲ್ಲಾಸದ ಕಾರ್ಯ. ಪ್ರವಾಹದ ವಿರುದ್ಧ ಈಜಿದರೂ ಈಜಿದರೆ. ಅಂತೆಯೇ ಸಂಪ್ರದಾಯಗಳನ್ನು ಮೀರಿ ನಿಲ್ಲುವ ಬಯಕೆ ಅವರದು.

ಪ್ರಾಥಮಿಕ ಶಾಲೆಯಲ್ಲಿ ಜಾಣ ವಿದ್ಯಾರ್ಥಿಯೆಂದು ಹೆಸರು ಪಡೆದ ಖಾಂಡೇಕರ ಮಾಧ್ಯಮಿಕ ಶಾಲೆಯಲ್ಲಿ ತಮ್ಮ ಪ್ರಥಮ ಸ್ಥಾನವನ್ನು ಕಾಯ್ದುಕೊಂಡೇ ಬೆಳೆಯುತ್ತಾರೆ. 1912ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು, ರಾಜ್ಯಕ್ಕೆ ಎಂಟನೆಯ ಸ್ಥಾನವನ್ನು ಪಡೆಯುತ್ತಾರೆ. ಇದು ಕಾಲದಲ್ಲಿ ಒಂದು ದೊಡ್ಡ ಸಾಧನೆ. ಪುಣೆಯ ಫರ್ಗ್ಯೂಸನ್ ಕಾಲೇಜಿಗೆ ಪ್ರವೇಶ ಪಡೆದು, ಶಿಕ್ಷಣ ಮುಂದುವರಿಸುತ್ತಾರಾದರೂ ಅದನ್ನು ಪೂರ್ಣಗೊಳಿಸುವುದು ಸಾಧ್ಯವಾಗುವುದಿಲ್ಲ. ಸ್ಕಾಲರ್ ಶಿಪ್ ಮತ್ತು ಮನೆಪಾಠಗಳಿಂದ ತಮ್ಮ ಉಪಜೀವನದ ವ್ಯವಸ್ಥೆ ಮಾಡಿಕೊಂಡಿದ್ದ ಖಾಂಡೇಕರರ ಜೀವನದಲ್ಲಿ ಇದ್ದಕ್ಕಿದ್ದಂತೆ ಜಮೀನ್ದಾರರಾಗಿದ್ದ ಅವರ ತಂದೆಯ ಸೋದರ ಸಂಬಂಧಿಕರು ಪ್ರವೇಶಿಸುತ್ತಾರೆ. ಇವರನ್ನು ದತ್ತಕ ಪುತ್ರರನ್ನಾಗಿ ಸ್ವೀಕರಿಸುತ್ತಾರೆ. ಇದು ನಡೆದದ್ದು 1914ರ ಜನವರಿ 13ರಂದು. ಈಗ ಗಣೇಶ ಆತ್ಮಾರಾಮ ಖಾಂಡೇಕರ, ವಿಷ್ಣು ಸಖಾರಾಮ ಖಾಂಡೇಕರ ಆದರು. ಅದರ ಸಂಕ್ಷಿಪ್ತ ರೂಪವೇ ಪ್ರಸಿದ್ಧ ಲೇಖಕರಾಗಿರುವ 'ವಿ.ಸ. ಖಾಂಡೇಕರ' ಎಂಬುದು.

ಜಮೀನ್ದಾರ ದತ್ತಕ ತಂದೆಯಿಂದ ತಮ್ಮ ಶಿಕ್ಷಣ ಸುಗಮವಾಗಿ ಸಾಗಬಹುದೆಂದು ಭಾವಿಸಿದ್ದ ಖಾಂಡೇಕರರು ಪರಸ್ಪರರ ಸಂಸ್ಕಾರ ಮತ್ತು ಒಲವುಗಳ ಭಿನ್ನತೆಯಿಂದಾಗಿ ಕಷ್ಟಕ್ಕೆ ಸಿಲುಕಿಕೊಳ್ಳುತ್ತಾರೆ. ಮಾನಸಿಕ ಸ್ವಾಸ್ಥ್ಯ ಕಳೆದುಕೊಳ್ಳುತ್ತಾರೆ. ಸಾಲದ್ದಕ್ಕೆ ಮಲೇರಿಯಾ ಕಾಯಿಲೆಗೆ ಗುರಿಯಾಗುತ್ತಾರೆ. ಈ ಸಂದರ್ಭದಲ್ಲಿ ಕೆಲಕಾಲ ಸಾವಂತವಾಡಿಯಲ್ಲಿ ದಿನಗಳೆಯುತ್ತಾರೆ.

ಅಸ್ವಸ್ಥತೆಯ ದಿನಗಳಲ್ಲಿ ಬೇರೆ ಬೇರೆ ಪುಸ್ತಕಗಳನ್ನು ಓದುತ್ತಿದ್ದ ಅವರು ಮಹಾರಾಷ್ಟ್ರದ ಸುಪ್ರಸಿದ್ಧ ಸಮಾಜ ಸುಧಾರಕರಲ್ಲೊಬ್ಬರಾದ ಆಗರಕರ ವಿಚಾರಗಳಿಗೆ ಮಾರು ಹೋಗುತ್ತಾರೆ. ತತ್ಪರಿಣಾಮವಾಗಿ ಗ್ರಾಮೀಣ ಪ್ರದೇಶದವರಿಗೆ ಉತ್ತಮ ಶಿಕ್ಷಣ ನೀಡುವ ಆಕಾಂಕ್ಷೆಯಿಂದ ಶಿರೋಡ ಎಂಬ ಹಳ್ಳಿಯಲ್ಲಿ 1920ರಲ್ಲಿ ಒಂದು ಇಂಗ್ಲಿಷ್ ಶಾಲೆಯನ್ನು ಪ್ರಾರಂಭಿಸುತ್ತಾರೆ, ಬೆಳೆಸುತ್ತಾರೆ.ಅದರ ಮುಖ್ಯಾಧ್ಯಾಪಕರಾಗಿಯೂ ಕಾರ್ಯ ಮಾಡುತ್ತಾರೆ. ವಿದ್ಯಾರ್ಥಿಗಳ ಹಿತ ಚಿಂತನೆಯಲ್ಲಿ ತನ್ಮಯರಾದ ಖಾಂಡೇಕರರು ವಿದ್ಯಾರ್ಥಿಗಳ ಅನನ್ಯ ಪ್ರೀತಿಯನ್ನು ಅನುಭವಿಸುತ್ತಾರೆ.

ಏಕಾಕಿಯಾಗಿದ್ದ ಖಾಂಡೇಕರರಿಗೆ ದತ್ತಕ ತಂದೆಯ ಸೋದರಿ ಹಾಗೂ ಬಾಲ ವಿಧವೆ ಅಕ್ಕಾ ಇವರ ಆಶ್ರಯಕ್ಕೆ ಬರುತ್ತಾರೆ. ಅಕ್ಕಾ ನಿಜವಾದ ಅಕ್ಕನಾಗಿ ಖಾಂಡೇಕರರ ಯೋಗ ಕ್ಷೇಮ ನೋಡಿಕೊಳ್ಳುತ್ತಾರೆ. ಸುಮಾರು 10-12 ವರ್ಷಗಳ ಕಾಲ ಶಿರೋಡ ಶಾಲೆಯ ಉನ್ನತಿಗಾಗಿ ದುಡಿಯುತ್ತ, ಕವಿತೆ, ಕತೆ, ಹರಟೆ, ನಾಟಕ, ಕಾದಂಬರಿ ಇತ್ಯಾದಿಗಳನ್ನು ಬರೆಯುತ್ತ ಹಾಯಾಗಿ ಜೀವನ ಸಾಗಿಸಿದ ಖಾಂಡೇಕರರು ವಿಷ ಜಂತುವಿನ ಬಾಧೆಯಿಂದ ಅಪಾಯಕ್ಕೆ ಸಿಕ್ಕು, ಸುದೈವದಿಂದ ಪಾರಾದರೂ ದೇಹದ ಬಣ್ಣ ಬೆಳ್ಳಗಾಗುತ್ತದೆ.

ಖಾಂಡೇಕರರು ಮದುವೆಯಾದದ್ದು 1929ರಲ್ಲಿ. ಆಗ ಅವರು ಶಿರೋಡ ಶಾಲೆಯ ಮುಖ್ಯಾಧ್ಯಾಪಕರು. ಅವರ ಪತ್ನಿ ಸೌ. ಉಷಾ ಹೆಚ್ಚು ಓದಿದವಳಲ್ಲ. ಆದರೆ ಸುಸಂಸ್ಕೃತ ಗೃಹಿಣಿ. ಖಾಂಡೇಕರರು ಅಕ್ಕನ ಹಾಗೂ ಪತ್ನಿಯ ಅನನ್ಯ ಪ್ರೀತಿಯಿಂದಾಗಿ ಅನೇಕ ಕಷ್ಟಗಳನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಯಿತು. ಶಿರೋಡದ ಹಳ್ಳಿಯಲ್ಲಿದ್ದುಕೊಂಡೇ ವಿವಿಧ ಬಗೆಯ ಬರವಣಿಗೆಯನ್ನು ಮಾಡುತ್ತಾ ಮಹಾರಾಷ್ಟ್ರದ ಒಬ್ಬ ಪ್ರಸಿದ್ಧ ಲೇಖಕರೆನಿಸಿದರು. ಅವರ ಕಥೆ, ಕಾದಂಬರಿಗಳು ಓದುಗರ ಮನಸ್ಸನ್ನು ಸೂರೆಗೊಂಡವು.

ಆಗ ಮರಾಠಿಯಲ್ಲಿ ಚಲಚ್ಚಿತ್ರಗಳು ಹೆಚ್ಚು ಆಕರ್ಷಿಸತೊಡಗಿದ್ದವು. ಮಹತ್ವದ ಲೇಖಕರಲ್ಲಿ ಕೆಲವು ಚಲಚ್ಚಿತ್ರಕ್ಕಾಗಿ ಕತೆಗಳನ್ನು ಬರೆಯತೊಡಗಿದ್ದರು. ಖಾಂಡೇಕರರೂ ಈ ನಿಟ್ಟಿನಲ್ಲಿ ಹಿಂದೆ ಬೀಳಲಿಲ್ಲ. ಇವರ ಕುತೂಹಲಕಾರಿಯಾದ ಕಥಾನಕಕ್ಕೆ, ಆಕರ್ಷಕವಾದ ಭಾಷಾ ಶೈಲಿಗೆ ಮಾರು ಹೋದ ನಿರ್ದೇಶಕರು ತಮಗೆ ಕತೆಗಳನ್ನು ಬರೆದುಕೊಡಲು ಕೇಳತೊಡಗಿದರು. ಈ ಸಂದರ್ಭದಲ್ಲಿ ಖಾಂಡೇಕರರು ಕೊಲ್ಹಾಪುರಕ್ಕೆ ಬಂದು ಒಂದು ಚಿತ್ರಪಟಕ್ಕಾಗಿಯೇ ಬರೆಯತೊಡಗಿದ್ದರಿಂದ ಶಿರೋಡ ಹೈಸ್ಕೂಲಿನಿಂದ

ನಿವೃತ್ತಿಯನ್ನು ಪಡೆಯಬೇಕಾಯಿತು. 1935-36 ರಿಂದ ಅವರು ಕೇವಲ ಬರೆಹಗಾರರಾಗಿಯೇ ಜೀವನ ಸಾಗಿಸಿದರು.

ಜನ್ಮತಃ ಕಣ್ಣಿನ ದೋಷವಿದ್ದುದರಿಂದ ಖಾಂಡೇಕರರ ಓದು ಬರವಣಿಗೆಯೆಲ್ಲ ಹಗಲಿನಲ್ಲಿಯೇ ನಡೆಯಬೇಕಾಗುತ್ತಿತ್ತು. ಅವರು ಮುಂಜಾನೆ 9 ರಿಂದ ಸಂಜೆಯ 6ರವರೆಗಿನ ಅವಧಿಯಲ್ಲಿ ಈ ಕಾರ್ಯ ಪೂರೈಸುತ್ತಿದ್ದರಂತೆ. ಸ್ನೇಹಮಯಿ, ತ್ಯಾಗಮಯಿ, ಕಷ್ಟ ಸಹಿಷ್ಣು, ಗುಣಗ್ರಾಹಿ ಇತ್ಯಾದಿ ಗುಣಗಳಿಂದ ಹಿರಿ-ಕಿರಿಯರ ಪ್ರೀತಿಗೆ ಪಾತ್ರರಾಗಿದ್ದ ಖಾಂಡೇಕರರನ್ನು ಮಹಾರಾಷ್ಟ್ರದ ಜನತೆ ಆತ್ಮೀಯವಾಗಿ 'ಬಾವು ಸಾಹೇಬ' ಎಂದು ಕರೆಯುತ್ತಿದ್ದರು.

ಜ್ಞಾನದಾನ ಮಾಡಲು ಖಾಂಡೇಕರರು ಶಿಕ್ಷಕರಾದರು. ಹಾಗೆಯೇ ಸಾಮಾಜಿಕ ಶಿಕ್ಷಣ ನೀಡಲು ಲೇಖಕರಾದರು. ಅವರ ಸ್ಮರಣ ಶಕ್ತಿ ವಿಲಕ್ಷಣವಾಗಿತ್ತು. ಅಧ್ಯಯನ ವ್ಯಾಪಕವಾಗಿತ್ತು. ಬರವಣಿಗೆ ಸರಸವೂ, ಹೃದ್ಯವೂ, ಪರಿಣಾಮಕಾರಿಯೂ ಆಗಿತ್ತು. ಮರಾಠಿ ಗದ್ಯದ ಬೆಳವಣಿಗೆಯಲ್ಲಿ ಅವರ ಪಾತ್ರ ಮಹತ್ವದ್ದೇ ಆಗಿದೆ. ಹಲವು ಸಮ್ಮೇಳನಗಳ ಅಧ್ಯಕ್ಷರಾದರು. ರಾಜ್ಯದ ರಾಷ್ಟ್ರದ ಪ್ರಶಸ್ತಿಗಳನ್ನೂ ಪಡೆದರು. 1918ರಲ್ಲಿ 'ಪದ್ಮ ವಿಭೂಷಣ'ರಾದರು. 1927ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದರು. ವಯಸ್ಸಿನ 79ನೆಯ ವರ್ಷದಲ್ಲಿ ಅಂದರೆ 1979ಸೆಪ್ಟೆಂಬರ್ 2ರಂದು ಸಾರ್ಥಕ ಬದುಕಿಗೆ ವಿದಾಯ ಹೇಳಿದರು. ಇದಿಷ್ಟು ವಿ.ಸ. ಖಾಂಡೇಕರರ ಜೀವನ ರೇಖೆ.

ವಿ.ಸ. ಖಾಂಡೇಕರರು ಸಾಹಿತ್ಯ ಸೃಷ್ಟಿಗೆ ತೊಡಗುವ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಆಗರಕರ, ಕೇಶವಸುತ, ಹರಿಭಾವು, ಕೋಲ್ಹಟಕರ, ಗಡಕರಿ ಇತ್ಯಾದಿ ಮಹನೀಯರು ಪ್ರಭಾವಶಾಲಿಯಾಗಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ಬರವಣಿಗೆ ಮಾಡತೊಡಗಿದ ಖಾಂಡೇಕರರು 'ಕುಮಾರ' ಎಂಬ ಕಾವ್ಯನಾಮದಿಂದ ಕವಿತೆಗಳನ್ನು 'ಆದರ್ಶ' ಎಂಬ ಇನ್ನೊಂದು ಸಾಂಕೇತಿಕ ಹೆಸರಿನಿಂದ ಹಾಸ್ಯ ಲೇಖನಗಳನ್ನೂ ಬರೆಯತೊಡಗಿದರು. ಆಮೇಲೆ ಗುಪ್ತ ನಾಮಗಳನ್ನು ಬಿಟ್ಟು ವಿ.ಸ. ಖಾಂಡೇಕರರಾಗಿಯೇ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡತೊಡಗಿದರು. ಅವರ ಮೊಟ್ಟ ಮೊದಲ ಕಥೆ 'ಮನೆ ಯಾರದು' (ಘರ ಕೋಣಾಚೆ) ಮಹಾರಾಷ್ಟ್ರ ಸಾಹಿತ್ಯ ಪತ್ರಿಕೆಯಲ್ಲಿ (1923 ರಲ್ಲಿ) ಪ್ರಕಟವಾಗಿ ಸೃಜನಶೀಲ ಲೇಖಕರ ಗಮನ ಸೆಳೆಯಿತು. ಅದಕ್ಕೂ ಪೂರ್ವದಲ್ಲಿ 'ನವಯುಗ' ಪತ್ರಿಕೆಯಲ್ಲಿ ಬಂದ, ಟೀಕಾತ್ಮಕವಾಗಿದ್ದ 'ಕೇಶವಸುತ ಸಂಪ್ರದಾಯ' ಎಂಬ ಮಾಡಖೋಲಕರರ ಲೇಖನಕ್ಕೆ ಖಾಂಡೇಕರರು ಬರೆದ ಪ್ರತಿಕ್ರಿಯೆ ಆ 'ನವಯುಗ ಪತ್ರಿಕೆಯಲ್ಲಿಯೇ (1919 ರಲ್ಲಿ) ಪ್ರಕಟವಾಗಿ ವಿದ್ವಾಂಸರ ಗಮನವನ್ನು ಸೆಳೆದಿತ್ತು. ಹೀಗೆ ನಿಯತ ಕಾಲಿಕೆಗಳಲ್ಲಿ ಬರವಣಿಗೆ ಪ್ರಾರಂಭಿಸಿದ ಖಾಂಡೇಕರರು 1929ರಲ್ಲಿ ಪ್ರಥಮ ಕಥಾ ಸಂಗ್ರಹ 'ನವಮಲ್ಲಿಕಾ', 1930ರಲ್ಲಿ ಪ್ರಥಮ ಕಾದಂಬರಿ 'ಹೃದಯದ ಕರೆ', 1936ರಲ್ಲಿ ಪ್ರಥಮ ಲಘು ನಿಬಂಧ ಸಂಕಲನ 'ವಾಯು ಲಹರಿ' ಪ್ರಕಟಿಸಿ ಮರಾಠಿಯ ಕ್ರಿಯಾಶೀಲ ಲೇಖಕರಾಗಿ ಬೆಳಕಾಗಿ ಬೆಳಕಿಗೆ ಬಂದರು. ಮುಂದೆ ಸುಮಾರು ಆರು ದಶಕಗಳಷ್ಟು ದೀರ್ಘ ಕಾಲಾವಧಿಯಲ್ಲಿ ಅವರು ವಿವಿಧ ಬಗೆಯ ಸಾಹಿತ್ಯ ನಿರ್ಮಿಸಿ ಕತೆ, ಕಾದಂಬರಿ ಕ್ಷೇತ್ರದ ದಿಗ್ಗಜರೆನಿಸಿದರು.

ಮರಾಠಿಯಲ್ಲಿ ನಿಯತಕಾಲಿಕೆಗಳ ಸಂಖ್ಯೆ ಹೆಚ್ಚಾಗಿರುವುದರಿಂದ 'ದೀಪಾವಳಿ' ವಿಶೇಷಾಂಕಗಳ ಹಾವಳಿ ವಿಪುಲವಾಗಿರುವುದರಿಂದ ಅಲ್ಲಿ ಕತೆ ಬರೆಯುವವರಿಗೆ ಅದು ಸುಗ್ಗಿಯ ಕಾಲ. ಖಾಂಡೇಕರರು ಬರವಣಿಗೆಗೆ ತೊಡಗಿದ ಕಾಲದಲ್ಲಿ 'ಯಶವಂತ' ಎಂಬ ಮಾಸ ಪತ್ರಿಕೆ ಸಣ್ಣ ಕತೆಗಳಿಗಾಗಿಯೇ ಮೀಸಲಾಗಿತ್ತು. ಆರಂಭದಲ್ಲಿ ಹರಿಭಾವು ಅವರನ್ನು ಅನುಕರಿಸಿದ, ಭಾಷೆಯ ಬಳಕೆಯಲ್ಲಿ ಕೊಲ್ಹಟಕರ ಮತ್ತು ಗಡಕರಿಯವರ ಮಾರ್ಗ ತುಳಿದ ಖಾಂಡೇಕರರು ತಮ್ಮದೇ ಆದ ದಾರಿಯಲ್ಲಿ ಮುನ್ನಡೆದರು. ಒಂದು ಅಂದಾಜಿನ ಪ್ರಕಾರ ಅವರು ಒಟ್ಟು ನಾಲ್ಕು ನೂರರಷ್ಟು ಕತೆಗಳನ್ನು ಬರೆದಿರುವುದಾಗಿ ತಿಳಿದು ಬರುತ್ತದೆ. 'ನವ ಮಲ್ಲಿಕಾ' 'ದತ್ತಕ ಮತ್ತು ಇತರ ಕತೆಗಳು' 'ಜೀವನ ಕಲಾ' 'ಬಿಸಿಲು ಮಳೆ' 'ವಿದ್ಯುತ್ ಪ್ರಕಾರ' 'ನವಚಂದ್ರಿಕಾ' 'ಸೂರ್ಯ ಕಮಲ' 'ಪೂಜನ' ಇತ್ಯಾದಿ ಮೂವತ್ತಕ್ಕೂ ಮಿಕ್ಕಿದ ಕಥಾ ಸಂಕಲನಗಳು ಗಮನಾರ್ಹವಾಗಿವೆ. ಮೊದ ಮೊದಲಿಗೆ ರಮ್ಯವಾದಿಗಳೆನಿಸುವ ಖಾಂಡೇಕರರು ಗಾಂಧೀವಾದ ಮತ್ತು ಮಾರ್ಕ್ಸ್‌ವಾದಗಳನ್ನು ಅರಗಿಸಿಕೊಂಡು ಸಮಾಜವಾದಿಗಳಾಗಿ, ಮಾನವತಾವಾದಿಗಳಾಗಿ ಕಾಣುತ್ತಾರೆ.

ಆರ್ಥಿಕ ವೈಷಮ್ಯವನ್ನು ಗುರುತಿಸಿ, ಬಡವರ ಬಗ್ಗೆ ಖಾಂಡೇಕರರು ತೋರುವ ಸಹಾನುಭೂತಿ ಹಾಗೂ ಸಮಾಜ ಪರಿವರ್ತನೆಯ ದೃಷ್ಟಿಕೋನ ಅವರ 'ಮನೆ ಹೊರಗೆ' 'ಹೂವು ಮತ್ತು ಕಲ್ಲು' 'ಮನುಷ್ಯ' 'ಪಶು ಮತ್ತು ಕಲ್ಲು' ಇತ್ಯಾದಿ ಕಥೆಗಳಲ್ಲಿ ವ್ಯಕ್ತವಾಗಿರುವುದರಿಂದ ಅವರನ್ನು ಮರಾಠಿ ವಿಮರ್ಶಕರು ಮಾಕ್ಸಿಂಗಾರ್ಕಿಗೆ ಹೋಲಿಸುತ್ತಾರೆ. ಕೆಲವು ಅಂಶಗಳಲ್ಲಿ ಮಾಕ್ಸಿಂಗಾರ್ಕಿಯನ್ನು ಮೀರಿಸುತ್ತಾರೆಂದೂ ಅಭಿಪ್ರಾಯಪಡುತ್ತಾರೆ. ಒಂದು ಮಾತು ಮಾತ್ರ ನಿಜ. ಖಾಂಡೇಖರರು ಧ್ಯೇಯವಾದಿಗಳು. ಸಂಪ್ರದಾಯ ವಿರೋಧಿಗಳು, ಬಡವರ ಪಕ್ಷಪಾತಿಗಳು. ಆದ್ದರಿಂದ ಮಾನವ ಸಮಾನತೆಯ ಆರಾಧಕರು.

ಖಾಂಡೇಕರರ ಸ್ವಾತಂತ್ರ್ಯ ಪೂರ್ವದ ಮತ್ತು ಸ್ವಾತಂತ್ರ್ಯಾನಂತರದ ಕತೆಗಳಲ್ಲಿ ವ್ಯತ್ಯಾಸವಿರುವುದು ಕಂಡು ಬರುತ್ತದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮರಾಠಿ ಸಾಹಿತ್ಯದಲ್ಲಿ ಹೊಸತನ ತರುವ ದೃಷ್ಟಿಕೋನ ವಿದ್ದರಿಂದ ಕತೆಯನ್ನು ಆಕರ್ಷಕವಾಗಿ, ರಂಜನೀಯವಾಗಿ ಅವರು ಕತೆಗಳನ್ನು ಬರೆದರು. ಮಹಾರಾಷ್ಟ್ರಿಗರಲ್ಲಿ ಓದುವ ಅಭಿರುಚಿಯನ್ನು ಹೆಚ್ಚಿಸುವ ಉದ್ದೇಶ ಅದರಲ್ಲಿತ್ತು. ಈ ನಿಟ್ಟಿನಲ್ಲಿ ಖಾಂಡೇಕರರ ಸಮಕಾಲೀನರಾಗಿದ ನಾ.ಸಿ. ಫಡಕೆಯವರ ಕಥಾ ಸೃಷ್ಟಿ ಮಹತ್ವದ ಪಾತ್ರ ವಹಿಸಿದೆ.

ಸ್ವಾತಂತ್ರ್ಯ ಪಡೆದ ಸಂಭ್ರಮದಲ್ಲಿಯೇ ನಿರ್ವಾಸಿತರ ಆಗಮನ, ಗಾಂಧೀ ಹತ್ಯೆ, ಮದ್ಯಪಾನ ವಿರೋಧದ ಸಮಸ್ಯೆ ಇತ್ಯಾದಿ ವಿಷಯಗಳು ಖಾಂಡೇಕರರನ್ನು ಕಾಡಿದವು. ಸಮಕಾಲೀನ ಸಂದರ್ಭದ ವಸ್ತುವನ್ನು ಆಯ್ದುಕೊಂಡು, ಪರಿಸ್ಥಿತಿಯನ್ನು ವಿಶ್ಲೇಷಿಸುವಂತ ಕತೆಗಳನ್ನು ಅವರು ಆಗ ಬರೆದರು.

ಪ್ರಗತಿ ಶೀಲ ಚಳವಳಿ ಮಹಾರಾಷ್ಟ್ರದಲ್ಲಿ ರೂಪಗೊಂಡಾಗ ರೈತ ಕಾರ್ಮಿಕ (ಶೇತ ಮಜೂರ), ನಗರದ ಕಾಮಗಾರ, ವೇಶ್ಯಾ, ಹರಿಜನ, ಆದಿವಾಸಿ ಇತ್ಯಾದಿ ಜನರ ಕಷ್ಟ ಕೋಟಲೆಗಳನ್ನು ಕತೆ ವಸ್ತುವಾಗಿ ಆಯ್ಕೆ ಮಾಡಿಕೊಂಡರು. ಈ ಸಂದರ್ಭದಲ್ಲಿ ಅವರ ಸಾಮಾಜಿಕ ಚಿಂತನೆ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಬೆಳೆಯಿತು.

ಸ್ತ್ರೀ ವಾದಿ ಸಾಹಿತ್ಯದ ಕಡೆಗೂ ಖಾಂಡೇಕರರ ಲಕ್ಷ್ಯವಿತ್ತು. ಸೋದರಿ, ಪತ್ನಿ, ತಾಯಿ, ಮಗಳು ಇತ್ಯಾದಿ ರೂಪಗಳಲ್ಲಿ ಸ್ತ್ರೀಯರನ್ನು ಹೃದ್ಯವಾಗಿ ಚಿತ್ರಿಸಿದ ಅವರು ವಿಧವೆಯರ, ಪತಿತರ, ಪರಿತ್ಯಕ್ತರ ಸಂತಾನ ವಿಹೀನರ ಬದುಕನ್ನು ಅವರು ಸೂಕ್ಷ್ಮವಾಗಿಯೇ ಗಮನಿಸಿದ್ದಾರೆ. ಕೌಟುಂಬಿಕ, ಸಾಮಾಜಿಕ ಪರಿಸರದ ಮೇಲೆ ಕ್ಷಕಿರಣ ಬೀರಲೂ ಯತ್ನಿಸಿದ್ದಾರೆ. ಹೀಗಾಗಿ ಅವರನ್ನು ಮರಾಠಿ

ವಿಮರ್ಶಕರು 'ಜೀವನವಾದಿ' ಲೇಖಕರೆಂದು ಗುರುತಿಸುತ್ತಾರೆ. ಫಡಕೆಯವರನ್ನು ಕಲಾವಾದಿ ಎಂದು ಹೇಳುತ್ತಾರೆ.

1950ರ ನಂತರ ನವ್ಯ ಕತೆಗಳು ಮರಾಠಿ ಸಾಹಿತ್ಯವನ್ನು ಪ್ರವೇಶಿಸಿದಾಗ ಖಾಂಡೇಕರರು ತಮ್ಮ ಎಂದಿನ ರೀತಿಯಲ್ಲಿಯೇ ತಮ್ಮ ಆದರ್ಶಕ್ಕನುಗುಣವಾಗಿ ಧ್ಯೇಯವಾದಿ ಕತೆಗಳನ್ನು ಬರೆದರು. ಅವರ ಸಾಹಿತ್ಯವನ್ನು ಓದುವ ವರ್ಗ ನಿರ್ಮಾಣವಾಗಿದ್ದರಿಂದ ಅವರ ಕತೆಗಳು ಕೊನೆಯವರೆಗೂ ಸ್ವಾಗತಿಸಲ್ಪಟ್ಟವು. ವರ್ಣನಾ ಪ್ರಧಾನ, ಪಾತ್ರ ಪ್ರಧಾನ ಹಾಗೂ ತಂತ್ರ ಪ್ರಧಾನ ಕತೆಗಳನ್ನು ಅವರು ಬರೆದರೂ ತಂತ್ರ ವೈವಿಧ್ಯ ಬೇಕಾದಷ್ಟಿತ್ತು. ಕತೆ ಆಕರ್ಷಕವಾಗಿರಬೇಕು. ಓದುಗರನ್ನು ತನ್ಮಯಗೊಳಿಸಬೇಕು. ಪರಿಣಾಮದಲ್ಲಿ ಏನಾದರೂ ಹೊಸ ಬೆಳಕನ್ನು ನೀಡಬೇಕೆನ್ನುವ ಅವರ ಧೋರಣೆ ಯಶಸ್ವಿಯಾಗಿಯೇ ಕಾರ್ಯ ಮಾಡಿದೆ. ಬಂಗಾಲಿಯ ಶರಶ್ಚಂದ್ರ ಚಟ್ಟೋಪಾಧ್ಯಾಯ, ಹಿಂದಿ ಪ್ರೇಮಚಂದರಂತೆ ಮರಾಠಿಯ ವಿ.ಸ. ಖಾಂಡೇಕರರಿಗೂ ಕಥಾ ಸೃಷ್ಟಿಯಲ್ಲಿಮಹತ್ವದ ಸ್ಥಾನವಿದೆ. ಹರಿಭಾವು ಆಪಟೆಯವರ ವಾರಸುದಾರರಾಗಿ ಮರಾಠಿ ಕಥಾ ಸಾಹಿತ್ಯವನ್ನು ಬೆಳೆಸಿದ ಖಾಂಡೇಕರರು ಜೀವನದ ಹಲವು ತಿರುವುಗಳಲ್ಲಿ ಸ್ವಲ್ಪ ಕಾಲ ಕಥಾ ಸೃಷ್ಟಿಯನ್ನು ಸ್ಥಗಿತಗೊಳಿಸಿದರೂ ಉತ್ತಮವಾದ ಕತೆಗಳನ್ನೇ ನೀಡಿದ್ದುದನ್ನು ಮರೆಯುವಂತಿಲ್ಲ. ಮರಾಠಿ ಕಥಾ ಸಾಹಿತ್ಯದಲ್ಲಿ ಅವರದೇ ಆದ ವೈಶಿಷ್ಟ್ಯವೊಂದಿದೆ, ಸ್ಥಾನವೂ ಇದೆ.

ಮರಾಠಿ ಕಾದಂಬರಿ ಕ್ಷೇತ್ರವನ್ನು ವಿಸ್ತರಿಸಿದವರಲ್ಲಿ ವಿ.ಸ. ಖಾಂಡೇಕರರ ಸ್ಥಾನ ಮಹತ್ವದ್ದಾಗಿದೆ. (ಹೃದಯದ ಕರೆ)ಯಿಂದ 'ಅಮೃತವೇಲ'ದವರೆಗೆ ಹದಿನೈದು ಕಾದಂಬರಿಗಳನ್ನು ನೀಡಿದ ಖಾಂಡೇಕರರು ಕಾದಂಬರಿಯಿಂದ ಕಾದಂಬರಿಗೆ ಬೆಳೆಯುತ್ತಲೇ ಹೋದವರು. 'ಯಯಾತಿ' ಅವರ ಬಹು ದೊಡ್ಡ ಕೊಡುಗೆ. ಹಾಗೆ ನೋಡಿದರೆ ಅವರ ಬಹುತೇಕ ಕಾದಂಬರಿಗಳ ವಸ್ತು ಸಾಮಾಜಿಕವಾಗಿದ್ದು, 'ಯಯಾತಿ'ಯ ವಸ್ತುವನ್ನು ಮಹಾಭಾರತದಿದ ಆಯ್ದುಕೊಂಡು ಸಮಕಾಲೀನ ಪ್ರಜ್ಞೆಯಿಂದ, ಮಾನಸ ಶಾಸ್ತ್ರೀಯ ದೃಷ್ಟಿಯಿಂದ ಬೆಳೆಸಿದ್ದು ಆಶ್ಚರ್ಯವನ್ನುಂಟು ಮಾಡುತ್ತದೆ. ಅದರ ಹರವೂ ದೊಡ್ಡದಾಗಿದೆ. ಒಂದು ಉಪಾಖ್ಯಾನದ ಕಥೆ ಇಲ್ಲಿ ಮಹಾಕಾವ್ಯದ ಕಥೆಯಂತೆ ಬೆಳೆದುಕೊಂಡು ಹೋಗಿದ್ದು ತುಂಬ ಸೋಜಿಗವನ್ನುಂಟು ಮಾಡುತ್ತದೆ.

1930ರಲ್ಲಿ ಸೃಷ್ಟಿಯಾದ 'ಹೃದಯದ ಕರೆ'ಗೂ 1960ರಲ್ಲಿ ರೂಪುಗೊಂಡ 'ಯಯಾತಿ'ಗೂ ಅನುಭವದಲ್ಲಿ, ಚಿಂತನೆಯಲ್ಲಿ, ಅಭಿವ್ಯಕ್ತಿಯ ಕ್ರಮದಲ್ಲಿ ಅಜಗಜಾಂತರ ವ್ಯತ್ಯಾಸವಿರುವುದನ್ನು ಕಾಣಬಹುದು. 'ಕಾಂಚನ ಮೃಗ' 'ಉಲ್ಕಾ' 'ಎರಡು ಧ್ರುವ' ಇವು ವರ್ಷಕ್ಕೊಂದರಂತೆ ಬೆಳಕು ಕಂಡರೂ ಖಾಂಡೇಕರರು ತಮ್ಮ ಬೆಳೆಯುತ್ತಿರುವ ಧ್ಯೇಯವಾದಿತ್ವವನ್ನು ಕ್ರಮೇಣ ಹಿಗ್ಗಿಸುತ್ತ ಹೋಗಿದ್ದುದು ಕಂಡು ಬರುತ್ತದೆ. ಪ್ರಥಮ ಕಾದಂಬರಿಯಲ್ಲಿ ಪ್ರೀತಿಗೆ ಅಗ್ರ ಪಟ್ಟವಿದೆ. ಶ್ರೀಮಂತಿಕೆಗಿಂತ, ಅಧಿಕಾರಕ್ಕಿಂತ ಪ್ರೀತಿಯೇ ಮಿಗಿಲಾದದ್ದೆಂದು ತೋರಿಸಲು ಕಾದಂಬರಿಯಲ್ಲಿ ಮೂರು ಜೋಡಿಗಳನ್ನು ನಿರ್ಮಿಸಿದ್ದಾರೆ. ಕಮಳ-ದಿವಾಕರ, ಕುಸುಮ-ಪ್ರಭಾಕರ, ಕುಮುದ-ಡಾ. ಭಾಗವತ ಇವೇ ಆ ಮೂರು ಜೋಡಿಗಳು. ಮೊದಲಿನ ಎರಡು ಜೋಡಿಗಳು ಪ್ರೀತಿಯ ಆಸರೆಯಲ್ಲಿ ಸುಖಿಯಾಗಿ ಬಾಳುತ್ತವೆ. ಪ್ರೀತಿಯ ಅಭಾವದಿಂದ ಕೊನೆಯ ಜೋಡಿ ದುಃಖವನ್ನೂ ಅನುಭವಿಸುತ್ತದೆ. ಕಾದಂಬರಿಯಲ್ಲಿ ಪ್ರೀತಿಯ ಸಮೀಕರಣ ಸಾಮಾನ್ಯವಾಗಿದಅದರೂ ರಸವತ್ತಾದ ನಿರಪೂಣೆಯಿಂದ ಯುವಕರ ಮನಸ್ಸು ಸೆರೆ ಹಿಡಿಯುತ್ತದೆ. ಅನುಭವಕ್ಕಿಂತ ಕಾಲ್ಪನಿಕತೆ ಮುಂದೆ ಬಂದು ಯೋಗಾ ಯೋಗದ ಮೇಲೆ ಒತ್ತು ಬೀಳುವುದರಿಂದ ಕಾದಂಬರಿ ವಾಸ್ತವತೆಯಿಂದ ದೂರ ಸರಿಯುತ್ತಿದ್ದರೂ ಹರಿಭಾವು ಅವರ ಶಿಷ್ಟ ಮತ್ತು ದುಷ್ಟ ಪಾತ್ರಗಳ ಸಂಘದ ನೆಲೆಯಲ್ಲಿ ಕಾದಂಬರಿ ಒಂದು ಪರಂಪರೆಯನ್ನು ಬೆಳೆಸಿ, ಓದುಗರಿಗೆ ಹರ್ಷವನ್ನು ನೀಡುತ್ತದೆ. ಈ ಪರಿಣಾಮ ರಮಣೀಯತೆಯಿಂದಾಗಿ ಖಾಂಡೇಕರರು ಪ್ರಥಮ ಕಾದಂಬರಿಯ ಮೂಲಕವೇ 'ಕಾದಂಬರಿಕಾರರು' ಎಂದು ಗುರುತಿಸುವಂತಾಗುತ್ತದೆ.

ಕಾಂಚನವೆಂಬ ಮೃಗವನ್ನು ನಂಬಿ, ನಿಜವಾಗಿ ಬದುಕಿಗೆ ಉಪಯುಕ್ತವಾಗುವ ಶ್ರಮ ಜೀವನವನ್ನು ಮರೆತು ಸಾಗುವುದು ನಿರಾಸೆಯನ್ನು, ದುಃಖವನ್ನು ಉಂಟು ಮಾಡುತ್ತದೆಂದು 'ಕಾಂಚನ ಮೃಗ' ಕಾದಂಬರಿ ಸೂಚಿಸುವುದರ ಜೊತೆಗೆ ಖಾಂಡೇಕರರ ಗ್ರಾಮೀಣ ಸೇವೆಯ ಸಿದ್ಧಾಂತವನ್ನು ಪ್ರತಿನಿಧಿಸುತ್ತದೆ. ಹಳ್ಳಿಯ ಸುಧಾರಕನ (ನಾಯಕನ ಹೆಸರು ಸುಧಾಕರ) ವ್ಯಕ್ತಿತ್ವವನ್ನು ರೂಪಿಸುವಲ್ಲಿ ಖಾಂಡೇಕರರು ತಮ್ಮನ್ನು ತಾವೇ ಅಭಿವ್ಯಕ್ತಿಸಿಕೊಂಡಂತಿದೆ. 'ಉಲ್ಕಾ' ಕಾದಂಬರಿ ಪ್ರಗತಿಪರ ದೃಷ್ಟಿ ಹೊಂದಿರುವುದನ್ನು ಗಮನಿಸ ಬಹುದು. ಈಕಾದಂಬರಿಯ ನಾಯಕಿ ಒಬ್ಬ ಶಿಕ್ಷಕನ ಮಗಳು. ಅವಳು ಬುದ್ಧಿವಳಂತಾಗಿದ್ದರೂ ಬಡವಳು ಮತ್ತು ಸ್ಫುರದ್ರೂಪಿಯಲ್ಲದವಳು. ಅವಳು ಜೀವನದ ತುಂಬ ಅನುಭವಿಸಿದ ಯಾತನೆಯ ಚಿತ್ರ ಇಲ್ಲಿದೆ. ಶ್ರೀಮಂತರಿಂದ ನಡೆಯುವ ಶೋಷಣೆ ಯಾವ ಯಾವ ಬಗೆಯದಾಗಿರುತ್ತದೆಂಬುದನ್ನು ಕಾದಂಬರಿ ಪರಿಣಾಮಕಾರಿಯಾಗಿಯೇ ಚಿತ್ರಿಸುತ್ತದೆ. ಜಮೀನುದಾರನ ಹೆಂಡತಿಯಾಗಿದ್ದ ಉಲ್ಕಾ ಪತಿಯ ಮರಣಾನಂತರ ಆತನ ಸಂಪತ್ತನ್ನು ಸಮಾಜಸೇವೆಗೆ ವಿನಿಯೋಗಿಸಲು ಒಂದು ಟ್ರಸ್ಟ್ ಮಾಡಿದ್ದು ಈ ಕಾದಂಬರಿಯಲ್ಲಿಯ ಒಂದು ವಿಶೇಷ ಉಲ್ಕಾ ತನ್ನ ಕಥೆಯನ್ನು ತಾನೇ ನಿರೂಪಿಸುವ ಇಲ್ಲಿ ತಂತ್ರ ಅತ್ಯಂತ ಜೀವಂತವಾಗಿದೆ, ಹೃದ್ಯವಾಗಿದೆ. ಅಂತಃಕರಣಕ್ಕೆ ತಟ್ಟುವ ಸನ್ನಿವೇಶ ಮತ್ತು ಭಾಷೆಗಳಿಂದ ಈ ಕಾದಂಬರಿ ಕಾಲದಲ್ಲಿ ಜನ ಮೆಚ್ಚುಗೆಯನ್ನು ಪಡೆದಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

'ಎರಡು ಧ್ರುವ' ಕಾದಂಬರಿಯಲ್ಲಿಯೂ 'ಉಳ್ಳವರ' ಮತ್ತು 'ಬಡವರ' ಸ್ಥಿತಿಗತಿಗಳನು ಅರ್ಥಪೂರ್ಣವಾಗಿ ಚಿತ್ರಿಸಲಾಗಿದೆ. ಶ್ರೀಮಂತರ, ಪ್ರತಿಷ್ಠಿತರ ಒಂದು ವರ್ಗ, ಉಪೇಕ್ಷಿತ, ಬಡವರ ಇನ್ನೊಂದು ವರ್ಗ ಇಲ್ಲಿ ಸಮಾಂತರ ರೇಖೆಗಳಾಗಿ ಸಾಗುತ್ತವೆ. ಈ ಎರಡೂ ವರ್ಗಗಳೇ ಎರಡು ಧ್ರುವಗಳು. ಕಲೆ-ಬದುಕು, ಭೋಗ-ತ್ಯಾಗ, ನೀತಿ-ಅನೀತಿ, ರಕ್ತ-ಬೆವರು ಇತ್ಯಾದಿ ಸಂಗತಿಗಳೂ ಎರಡು ಧ್ರುವಗಳನ್ನು ಸಂಕೇತಿಸುತ್ತವೆ. ಈ ಕಾದಂಬರಿಯಲ್ಲಿ ಶ್ರೀಮಂತರ, ಮಾಲಿಕರ, ವಿಲಾಸಿಗಳ ಜೀವನದ ಶೋಷಣೆಯ ಸ್ವರಗಳಿದ್ದರೆ, ಗಾಂಧೀವಾದದ, ಮಾರ್ಕ್ಸ್‌ವಾದದ ಮಾನವೀಯತೆ ಮತ್ತು ಸಮಾನತೆಗಳ ಆದರ್ಶದ ಎಳೆಗಳೂ ಇವೆ. ಖಾಂಡೇಕರರು ಯಾವಾಗಲೂ ಜೀವನವಾದಿಯಾಗಲು ಚಡಪಡಿಸಿದವರು. ಹಾಗಾಗಿ ಅವರು ಸ್ವಾತಂತ್ರ್ಯ ಪೂರ್ವದ ಆದರ್ಶಗಳಿಗೆ ಬದ್ಧರಾಗಿ, ಸಾಮಾಜಿಕ ಪರಿವರ್ತನೆಯ ದೃಷ್ಟಿಕೋನದಿಂದ ಕಾದಂಬರಿಗಳನ್ನು ಬರೆದಿರುವುದು ಕಂಡು ಬರುತ್ತದೆ.

ನಾಲ್ಕಾರು ವರ್ಷ ಸತತವಾಗಿ ವರ್ಷಕ್ಕೊಂದರಂತೆ ಕಾದಂಬರಿ ನೀಡಿದ ಖಾಂಡೇಕರರು 1939ರಲ್ಲಿ ಮೂರು ಕಾದಂಬರಿಗಳನ್ನು ಪ್ರಕಟಿಸುತ್ತಾರೆ. ಆಮೇಲೆ ಮತ್ತೆ ವರ್ಷಕ್ಕೊಂದರಂತೆ ಮೂರು ಕಾದಂಬರಿ

ಬರೆದ ಅವರು ಒಮ್ಮೆಲೇ ತಟಸ್ಥರಾಗುತ್ತಾರೆ. 1930 ರಿಂದ 1942ರ ಅವಧಿಯಲ್ಲಿ ಹನ್ನೆರಡು ಕಾದಂಬರಿಗಳನ್ನು ಬರೆದ ಅವರು ಮುಂದೆ ಹನ್ನೆರಡು ವರ್ಷ ಒಂದೂ ಕಾದಂಬರಿ ಪ್ರಕಟಿಸದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಆ ಕಾಲದಲ್ಲಿ ಅವರು ಚಿತ್ರಪಟ ಕತೆಗಳ ಕಡೆಗೆ ಹೆಚ್ಚು ಲಕ್ಷ್ಯವಿಟ್ಟಂತೆ ತೋರುತ್ತದೆ.

ಸ್ವಾತಂತ್ರ್ಯ ನಂತರ ಅವರು ಬರೆದ ಕಾದಂಬರಿಗಳು ಮೂರೇ ಮೂರು 1. ಅಶ್ರು (1954), 2. ಯಯಾತಿ (1960), 3. ಅಮೃತ ವೇಲ (1969).

ಸ್ವಾತಂತ್ರ್ಯ ನಂತರ ಮಧ್ಯಮ ವರ್ಗದ ಜೀವನದಲ್ಲಾದ ಏರುಪೇರುಗಳನ್ನು ಖಾಂಡೇಕರರು ಚಿತ್ರಿಸಲು ಯತ್ನಿಸುತ್ತಾರೆ. ಆದರೆ ಮಾಡಖೋಲಕರ, ಕಾನೇಟಕರ, ಪೆಂಡೆ, ಮಾಡಗೂಳಕರ ಇತ್ಯಾದಿ ಲೇಖಕರು ಬರೆದಂತೆ ಹೊಸ ತಂತ್ರ, ಹೊಸ ವಾತಾವರಣ ನಿರ್ಮಿಸಿಕೊಳ್ಳುವುದು ಖಾಂಡೇಕರರಿಗೆ ಕಷ್ಟಕರವಾಯಿತು. ತಮ್ಮ ಮೊದಲಿನ ಆದರ್ಶಗಳ ತಳಹದಿಯ ಮೇಲೆ ನವೀನ ಜೀವನವನ್ನು ಅವರು ನೋಡತೊಡಗಿದರು. 'ಅಶ್ರು' ಒಂದು ದುಃಖಾಂತಿಕ ಕಾದಂಬರಿಯಾಗಬೇಕಾಗಿತ್ತು. ಬಡತನವನ್ನು ಎದುರಿಸುತ್ತ, ತತ್ತ್ವ ನಿಷ್ಠೆಗೆ ಗಟ್ಟಿಯಾಗಿ ಅಂಟಿಕೊಳ್ಳುತ್ತ ಬಾಳಿದ ಶಿಕ್ಷಕ ಬದುಕು ಇದರ ವಸ್ತು. ಅದರಿಂದಾಗಿ ದುಃಖ ಸಹಿಸಿಕೊಳ್ಳುವುದರ ಕಡೆಗೆ ಕಾದಂಬರಿಕಾರರ ಲಕ್ಷ್ಯವಿರುವುದರಿಂದ ದುಃಖಾಂತಿಕವನ್ನು ತೆಳ್ಳಗಾಗಿಸುತ್ತದೆ.

'ಯಯಾತಿ' ಭೋಗ ಜೀವನದ ಮೇಲೆ ಒತ್ತು ಕೊಡುವ, ದೇವಯಾನಿ ಮತ್ತು ಶರ್ಮಿಷ್ಠೆಯರ ವಿರುದ್ಧ ಎತ್ತಿ ತೋರಿಸುವ, ಪೌರಾಣಿಕತೆಯಲ್ಲಿ ಆಧುನಿಕತೆಯನ್ನು ಸಮಾವೇಶಗೊಳಿಸುವ ವಿಶಿಷ್ಟ ಕಾದಂಬರಿ. ಭೋಗಲಂಪಟತೆ ಆಧುನಿಕ ಬದುಕಿನಲ್ಲಿ ವಿಶೇಷವಾಗಿರುವುದನ್ನು ಗಮನಿಸಿದ, ತಾತ್ವಿಕ ಮೌಲ್ಯಗಳು ವಿಚ್ಛೇದನಗೊಳ್ಳುವುದನ್ನೂ ಕಂಡುಕೊಂಡ ಖಾಂಡೇಕರರು, ಈ ಬೃಹತ್ ಕಾದಂಬರಿಯನ್ನು ತಮ್ಮ ಜೀವನಾನುಭವದ ಹಲವು ತಿರುವುಗಳೊಂದಿಗೆ ಮನೋಜ್ಞವಾಗಿಯೇ ರಚಿಸಿದ್ದಾರೆ. ಇದು ಮರಾಠಿ ಸಾಹಿತ್ಯಕ್ಕೆ ನೀಡಿದ ಒಂದು ಮಹತ್ವದ ಕೊಡುಗೆ. ಈ ಕಾದಂಬರಿಯೂ ಅವರ ಸಾಹಿತ್ಯವೂ ಬೆಲೆಯುಳ್ಳದ್ದಾಗಿರುವುದನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ.

ಖಾಂಡೇಕರರಿಗೆ ಪ್ರಿಯವಾಗಿರುವ ಇನ್ನೊಂದು ಸಾಹಿತ್ಯ ಪ್ರಕಾರ ಲಲಿತ ಪ್ರಬಂಧ. ಮರಾಠಿಯಲ್ಲಿ ಇದನ್ನು ಲಘು ನಿರ್ಬಂಧ ಎಂದು ಕರೆಯಲಾಗುತ್ತದೆ. ಮರಾಠಿಯಲ್ಲಿ ಈ ಬಗೆಯ ನಿಬಂಧ ರಚನೆ ವಿಪುಲವಾಗಿದೆ. ಪು.ಲ. ದೇಶಪಾಂಡೆಯವರ ಲಘು ನಿಬಂಧಗಳ ಪರಿಚಯವಿಲ್ಲದ ಮರಾಠಿ ಓದುಗನೇ ಇಲ್ಲವೆಂದು ಹೇಳಬೇಕು. ಲಘು ನಿಬಂಧಗಳ ಇನ್ನೊಂದು ಹೆಸರು ಕನ್ನಡದಲ್ಲಿ ಹರಟೆ. ಖಾಂಡೇಕರರು ಹರಟೆ ಪ್ರಿಯರೆಂದು ಮರಾಠಿ ಬಲ್ಲವರಿಗೆಲ್ಲ ತಿಳಿದಿರುವ ವಿಷಯ. ಕತೆ, ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದ ಹೊಸದರದಲ್ಲಿಯೇ ಅವರು ಲಘು ನಿಬಂಧಗಳನ್ನು ಬರೆಯಲೂ ಸುರು ಮಾಡಿದರು. ಅವರ ಪ್ರಥಮ ಲಘು ನಿಬಂಧಗಳ ಸಂಕಲನ ಪ್ರಕಟವಾದದ್ದು 1936ರಲ್ಲಿ. ಆ ನಂತರ ಸುಮಾರು ಹತ್ತು ಸಂಕಲನಗಳನ್ನು ಅವರು ಪ್ರಕಟಿಸಿರುವರು. ವಾಯುಲಹರಿ, ಬೆಳದಿಂಗಳಲ್ಲಿ, ಸಾಯಂಕಾಲ, ಅವಿನಾಶ, ಮಂದಾಕಿನಿ, ಕಲ್ಪಕತಾ ಇತ್ಯಾದಿ ಸೊಗಸಾದ ಹೆಸರುಗಳುಳ್ಳ ಅವು ರಂಜನೀಯವಾಗಿರುವಂತೆ, ಉದ್ಬೋಧಕವೂ ಆಗಿವೆ. ತಿಳಿ ಹಾಸ್ಯದಿಂದ ಕೂಡಿದ ಅವು ಆಕರ್ಷಕವೂ ಆಗಿವೆ. ಒಂದು ಪೈಸೆ (ಏಕ್ ಪೈಸಾ), ಮೂರನೆಯ ವರ್ಗದ ಪ್ರಯಾಣ (ತಿಸ್ರಾ ವರ್ಗಾಚಾ ಪ್ರವಾಸ), ದಾಡಿ ಮತ್ತು ಕನ್ನಡಿ (ದಾಢೀ ಆಣಿ ಆರಸಾ) ರಬ್ಬರ ಪುಗ್ಗಾ (ರಬ್ಬರಿ ಫುಗೆ) ಇತ್ಯಾದಿ ಲಘು ನಿಬಂಧಗಳು ಚಿತ್ತಾಕರ್ಷಕವಾಗಿವೆ. ಅವರ ಬೈಗುಳಗಳು (ಶಿವ್ಯಾ) ಎಂಬ ನಿಬಂಧ ಆ ಕಾಲದಲ್ಲಿ ಬಹಳಷ್ಟು ಪ್ರಚಾರವನ್ನು ಪಡೆದಿತ್ತು. ಕಾವ್ಯಾತ್ಮಕವಾಗಿ ಖಾಂಡೇಕರರ ಭಾಷೆ ಲಘು ನಿಬಂಧಗಳಿಗೆ ಸಹಜವಾಗಿ ಹೊಂದಿಕೊಂಡಿದೆ. ಸಂಸ್ಕೃತ, ಇಂಗ್ಲೀಷ್ ಉದ್ಧರಣೆಗಳು, ಲೌಕಿಕ, ಸಾಹಿತ್ಯಿಕ ಮತ್ತು ತಾತ್ತ್ವಿಕವಾದ ಅವರ ಜ್ಞಾನ ಲಘು ನಿಬಂಧದ ಸಂವಹನ ಕ್ರಿಯೆಗೆ ಒಂದು ಬಗೆಯ ಹೊಳಪನ್ನು ತಂದು ಕೊಟ್ಟಿವೆ. 'ಮನುಷ್ಯ ಯಾವಾಗಲೂ ಹೊಸ ಕನಸುಗಳ ಮೇಲೆ ಜೀವಿಸುತ್ತಾನೆ' ಎಂಬುದು ಖಾಂಡೇಕರರೇ ಒಂದು ಲಘು ನಿಬಂಧದಲ್ಲಿ ಹೇಳಿದ ಮಾತು. ಅಂಥ ಕನಸುಗಾರಿಕೆಯ ಮೂಲಕವೇ ಅವರು ಹಗಲುಗನಸುಗಳನ್ನೂ ಕಂಡವರು. ಅವರ ಲಘು ನಿಬಂಧಗಳನ್ನು ಕುರಿತು ಆಲೋಚಿಸುವ ಮರಾಠಿಯ ವಿಮರ್ಶಕರು ಹೇಳುವ ಒಂದೆರಡು ಮಾತುಗಳನ್ನು ಇಲ್ಲಿ ಗಮನಿಸುವುದು ಸೂಕ್ತವೆನಿಸುತ್ತದೆ.

'ಇಲ್ಲಿ ಖಾಂಡೇಕರರ ವ್ಯಕ್ತಿತ್ವ, ಅವರ ಸೌಜನ್ಯ, ಅವರ ಸಹೃದಯತೆ, ಅವರ ಸೌಂದರ್ಯ ಪೂಜಕ ವೃತ್ತಿ ಇತ್ಯಾದಿಗಳು ಅತ್ಯಂತ ಆಕರ್ಷಕವಾಗಿವೆ. ಕಾದಂಬರಿ ಅಥವಾ ನಾಟಕ ಈ ಮಾಧ್ಯಮಗಳಿಗಿಂತ ಲಘು ನಿಬಂಧದಂಥ ಪರ್ಸನಲ್ ವಾಙ್ಮಯ ಪ್ರಕಾರದಲ್ಲಿ ಅವರು ಹೆಚ್ಚು ಮನೋಹರವಾಗಿ ಕಾಣುತ್ತಾರೆ.'

'ಖಾಂಡೇಕರರನ್ನು ಅಗದಿ ಖಾಸಗಿಯಾಗಿ ಎಲ್ಲಿಯಾದರೂ ಭೇಟಿಯಾಗುವುದಾದರೆ ಅದು ಅವರ ಲಘು ನಿಬಂಧಗಳಲ್ಲಿ, ಲಘು ನಿಬಂಧಗಳಲ್ಲಿ ಅವರು ಹರಟೆ ಹೊಡೆಯುತ್ತ, ಅನೌಪಚಾರಿಕವಾಗಿ ಮಾತಾಡುತ್ತ ಇರುವುದು ಕಂಡು ಬರುತ್ತದೆ.'

'ಖಾಂಡೇಕರರ ಸ್ವಭಾವದಲ್ಲಿಯ ನಿಜವಾದ ವಿನೋದ ವೃತ್ತಿಯನ್ನು ವಿಶೇಷವಾಗಿ ಕಾಣಲು ದೊರೆಯುವುದು ಅವರ ಲಘು ನಿಬಂಧಗಳಲ್ಲಿಯೇ'

ಅಕೃತಕವಾದ ಅವರ ಲಘು ನಿಬಂಧಗಳೂ ಕೂಡ ಅವರ ಮಹತ್ವದ ಸಾಹಿತ್ಯ ಸೃಷ್ಟಿ ಎನ್ನುವುದರಲ್ಲಿ ಸಂದೇಹವಿಲ್ಲ.

ಖಾಂಡೇಕರರು ಆಧುನಿಕ ಮರಾಠಿ ಸಾಹಿತ್ಯದ ಅಧ್ಯಯನವನ್ನು ಅದರ ಆರಂಭದಿಂದಲೂ ಮಾಡುತ್ತ ಬಂದವರು. 1919ರಲ್ಲಿ ಅವರು ಮಾಡಖೋಲಕರರು 'ನವಯುಗ ಮಾಸಪತ್ರಿಕೆಯಲ್ಲಿ ಬರೆದ 'ಕೇಶವಸುತರ ಸಂಪ್ರದಾಯ' ಎಂಬ ಲೇಖನಕ್ಕೆ ಪ್ರತಿಕ್ರಿಯಾತ್ಮಕ ಅಭ್ಯಾಸಪೂರ್ಣ ಲೇಖನ ಮರಾಠಿ ಸಾಹಿತ್ಯಾಭ್ಯಾಸಿಗಳ ಗಮನವನ್ನು ಸೆಳೆದುಕೊಂಡಿದ್ದರು. ಕತೆ, ಕಾದಂಬರಿ, ಲಘು ನಿಬಂಧ ಇತ್ಯಾದಿ ಸೃಜನಶೀಲ ಬರವಣಿಗೆ ಮಾಡುತ್ತಲೇ ಅವರು ವಿಮರ್ಶೆಗಳನ್ನು ಬರೆಯತೊಡಗಿದರು. ವಿಶೇಷವಾಗಿ ಅವರು ಕೇಶವಸುತ, ಆಗರಕರ, ಗಡಕರಿ, ಮತ್ತು ವಾ.ಮ. ಜೋಶಿಯವರನ್ನು ಕುರಿತು ಬರೆದ ವ್ಯಕ್ತಿ ಮತ್ತು ವಾಙ್ಮಯ ಅಥವಾ ವಿಚಾರ ಎಂಬ ಗ್ರಂಥಗಳು ಈಗಲೂ ಮರಾಠಿ ಅಭ್ಯಾಸಿಗಳಿಗೆ ಪ್ರಮಾಣ ಗ್ರಂಥಗಳಾಗಿವೆ. 'ಮರಾಠಿಯ ನಾಟ್ಯ ಸಂಸಾರ' 'ಶೇಷಾ ಮತ್ತು ರಂಗ' 'ರಂಗ ಮತ್ತು ಗಂಧ' ಇತ್ಯಾದಿ ಕೃತಿಗಳು ನಾಟ್ಯ ಕಲೆಯ, ಜೊತೆ ಜೊತೆಗೆ ಕಾವ್ಯ ಸಾಹಿತ್ಯಗಳ ವಿವಿಧ ಮುಖ ಪರಿಚಯ ಮಾಡಿಕೊಡುತ್ತವೆ. ಸುಮಾರು ಹದಿನಾಲ್ಕರಷ್ಟು ಅವರ ಸಮೀಕ್ಷಾ ಗ್ರಂಥಗಳಿವೆ.

ಮೂಲತಃ ಖಾಂಡೇಕರರು ಸೌಂದರ್ಯೋಪ

(ಪುಟ 12ಕ್ಕೆ)

ಜೂನ್ ಎಂಟು

ಮೂಲ ಮರಾಠಿ: ವಿ.ಸ. ಖಾಂಡೇಕರ

ಅನು: ಅನಿಕೇತನ

ಸಿಂಧು ತರಗತಿಯಿಂದ ಹೊರ ಬಂದಾಗ ಶಾಲೆಯ ದೊಡ್ಡ ಅಂಗಣ ಹುಡುಗಿಯರಿಂದ ತುಂಬಿ ಹೋಗಿತ್ತು, ಚಿಲಿಪಿಲಿಗುಟ್ಟುತ್ತ ಶಾಲೆಯ ಗೇಟು ದಾಟುತ್ತಿರುವ ಅವರನ್ನು ನೋಡಿ ಆಕೆಗನಿಸಿತು. ತಾನೂ ಈ ವಯಸ್ಸಿನವಳಿದ್ದಾಗ ರಜೆ ಬಂದರೆ ಅದೆಂತಹ ವಿಲಕ್ಷಣ ಆನಂದವಾಗುತ್ತಿತ್ತು!

ಆದರೆ ಇಂದು ಬೆಳಿಗ್ಗೆ ಕ್ಯಾಲೆಂಡರಿನ ತಾರೀಖು ಬದಲಿಸ ಹೊರಟಾಗ ಏನು ಮಾಡಿದರೂ ಈ ಎಪ್ರಿಲ್ ಇಪ್ಪತ್ತೆರಡರ ಹಾಳೆಯನ್ನು ಕಿತ್ತೆಸೆಯಲು ಮನಸ್ಸಾಗಲೊಲ್ಲದು. ಎಪ್ರಿಲ್ ಇಪ್ಪತ್ತೆರಡೇನು, ಇಪ್ಪತ್ಮೂರೇನು, ಇಪ್ಪತ್ನಾಲ್ಕೇನು, ಎಲ್ಲಾ ದಿನಗಳೂ ಒಂದೇ ಅಂತನಿಸತೊಡಗಿತು.

ಮುಖ ತೊಳೆಯಲು ಹೊರ ಬಂದಾಗ 'ಕುಹೂ-ಕುಹೂ' ಅಂತ ಉಲಿಯುತ್ತಿದ್ದ ಕೋಗಿಲೆಯ ದನಿ ಕೇಳಿಸಿತು. ತಾನು ಕಕ್ಕೆತ್ತಿ ಆ ಗಿಡಕ್ಕೆ ನೇತು ಬಿದ್ದ ಚಿಕ್ಕ- ಚಿಕ್ಕ ಮಾವುಗಳು ಅದೆಷ್ಟು ಸುಂದರವಾಗಿ ಕಾಣುತ್ತಿದ್ದವು.

ತಾನಂದುಕೊಂಡೆ ಎಲ್ಲಾ ದಿನಗಳೂ ಒಂದೇ ತೆರನಾಗಿರುವುದಿಲ್ಲ. ಈಗ ವಸಂತ ಸುರುವಾಗಿದೆ.

ಶಾಲೆಯಿಂದ ಮನೆಗೆ ಮರಳುತ್ತಿದ್ದಾಗ ನೀಲಿ ಬಣ್ಣದ ಶುಭ್ರ ಆಕಾಶ ಸಿಂಧೂಗೆ ಹೇಳುತ್ತಿತ್ತು. ಈಗ ವಸಂತದ ರಾಜ್ಯ ಸುರುವಾಗಿದೆ. ಕೋಣೆಗೆ ಬಂದು ಬೇಗ ತೆರೆಯುತ್ತಿದ್ದಾಗ ಪಕ್ಕದ ಮನೆಯ ಪುಟಾಣಿ ಮೀನೂ, 'ಸಿಂಧೂ ತಾಯಿ, ನಿಮಗೆ ಕವಳೀ ಹಣ್ಣುಗಳು ಬೇಕೆ? ಅಂತ ಅಂದಾಗಲೂ ಆಕೆ ವಸಂತ ಸುರುವಾಗಿದೆಯೆಂದು ಹೇಳುತ್ತಿದ್ದಾಳೆ ಅಂತನಿಸಿತು.

ಮೀನೂನ ಕೈಯಲ್ಲಿನ ಕವಳಿ ಹಣ್ಣೊಂದನ್ನು ತಿನ್ನುತ್ತಲೇ ಆಕೆ ಬೇಗ ತೆರೆದಳು. ಎದುರಿಗೇ ಕ್ಯಾಲೆಂಡರು ಇತ್ತು. ದರಬಾರದಲ್ಲಿ ವಂದಿಮಾಗಧರು ಘೋಷಣೆ ಹಾಕುವ ಹಾಗೆ ಈ ಕ್ಯಾಲೆಂಡರು 'ಇಪ್ಪತ್ಮೂರು ಎಪ್ರಿಲ್! ಲಕ್ಷ್ಯವಿರಲಿ! ಅಂತ ಕೂಗಿ ಹೇಳುತ್ತಿರುವಂತೆನಿಸಿತು.

ಬಾಯಿಯಲ್ಲಿನ ಕವಳಿ ಹಣ್ಣುಗಳ ಬೀಜಗಳನ್ನು ಚೆಲ್ಲಲೆಂದು ಆಕೆ ಕಿಡಕಿಯ ಬಳಿ ಬಂದಳು. ಅದರ ಗಾಢ ಕಪ್ಪು ವರ್ಣ, ಹುಳಿ ಮಧುರ ರುಚಿ ಆ ಬೀಜಗಳು ಹಣ್ಣಿನ ಒಡಲಲ್ಲೇ ಇದ್ದರೂ ಅವುಗಳಿಗೆ ಹಣ್ಣಿನ ರುಚಿಯ ಲಾಭ ತಟ್ಟಿರಲಿಲ್ಲ. ಆಕೆಯ ಒಳಮನಸ್ಸು ಹೇಳುತ್ತಿತ್ತು, ತನ್ನ ಜೀವನವೂ ಈ ಬೀಜಗಳಂತೆಯೇ ಆಗಿದೆಯೇ? ತನ್ನ ಸುತ್ತ

ಟೇಬಲ್ ಮೇಲಿನ ಪುಸ್ತಕದೆಡೆ ಆಕೆ ಕಣ್ಣು ಹಾಯಿಸಿದಳು. ಐದು ವರ್ಷಗಳ ಹಿಂದೆ ಅದೆಷ್ಟು ಹುರುಪಿನಿಂದ ಆಕೆ ಈ ಕುರ್ಚಿಯಲ್ಲಿ ಕೂತಿದ್ದಳು ! ಚಿಕ್ಕ ವಯಸ್ಸಿನ ಹುಡುಗಿಯರ ಬಾಳಿಗೊಂದು ರೂಪು ಕೊಡುವ ಪವಿತ್ರ ಕಾರ್ಯವನ್ನು ತಾನು ಕೈಗೊಂಡಿದ್ದೇನೆಂದು ಶ್ರದ್ಧೆಯಿಂದ ಕೆಲಸ ಮಾಡಲು ಶುರು ಮಾಡಿದ್ದಳು. ಪುಸ್ತಕಗಳನ್ನೋದುವುದು. ನೋಟ್ಸ್ ಮಾಡುವುದು, ಪ್ರಸಿದ್ಧ ಸ್ತ್ರೀಯರ ಕತೆಗಳನ್ನು ಹುಡುಗಿಯರಿಗೆ ಹೇಳುವುದು, ಚರ್ಚಾ ಸ್ಪರ್ಧೆಗಳಿಗಾಗಿ ಭಾಷಣ ತಯಾರಿಸುವುದು ಮೊದಲ ವರ್ಷ ಅದೆಷ್ಟು ಅವಸರದಿಂದ ಕಳೆದು ಹೋಗಿತ್ತು! ಆದರೆ ಮೊದಲ ವರ್ಷದ ರುಚಿ ಎರಡನೆಯ ವರ್ಷ ಉಳಿದಿರಲಿಲ್ಲ. ಮೂರನೆಯ ವರ್ಷ ಅವಳಿಗೆ ತುಸು ಬೇಸರವೇ ಬಂದಿತ್ತು. ನಾಲ್ಕನೆಯ ವರ್ಷ ಡಾಕ್ಟರರು ಅವಳಿಗೆ 'ನಿಮಗೇನೂ ಆಗುವುದಿಲ್ಲ' ಅಂತ ಹೇಳಿದರೂ ಆಕೆ ನಡುನಡುವೆ ಆಗೀಗ ಟಾನಿಕ್ ತೆಗೆದುಕೊಳ್ಳತೊಡಗಿದ್ದಳು. ಈ ಸಲವಂತೂ...

ಅನೇಕ ಸಲ ತರಗತಿಗಳಲ್ಲಿ ಕಲಿಸುತ್ತಿದ್ದಾಗ ಆಕೆಗೆ ನಡುವೆಯೇ ಅನಿಸುತ್ತಿತ್ತು. ತಾನೊಂದು ದೇಗುಲದಲ್ಲಿ ಕೂತು ಕಾಣದೇ ಇರುವ ದೇವರಿಗೆ ಅಭಿಷೇಕ ಮಾಡುತ್ತಿದ್ದೇನೆ. ಅರ್ಥ ತಿಳಿಯದೇ ಇರುವ ಮಂತ್ರ ಜಪಿಸುತ್ತಿದ್ದೇನೆ. ಸಂಜೆ ಶಾಲೆ ಬಿಟ್ಟ ನಂತರ ಒಮ್ಮೊಮ್ಮೆ ಅನಿಸುತ್ತಿತ್ತು. ಪಕ್ಕದ ಗಿರಣಿಯಲ್ಲಿ ಕೆಲಸ ಮಾಡುವ ಹೆಂಗಸರು ಏಳು ಗಂಟೆಗೆ ಬಿಡುಗಡೆಯಾಗುತ್ತಾರೆ. ತಾನು ಐದು ಗಂಟೆಗೇ ಬಿಡುಗಡೆಯಾಗಿರುವೆ ಇದಿಷ್ಟೇ ವ್ಯತ್ಯಾಸ.

ಇನ್ನು ಮತ್ತೆ ಜೂನ್ ಎಂಟನೇ ತಾರೀಕಿಗೆ ಈ ಶಾಲೆಯಲ್ಲಿ ತನ್ನ ಆರನೆಯ ವರ್ಷ ಸುರುವಾಗುವುದು. ಹೀಗೆ ತಾನು ಇನ್ನೆಷ್ಟು ವರ್ಷಗಳನ್ನು ಕಳೆಯಬೇಕು? ವರ್ಷಗಳು ಕಳೆದ ಹಾಗೆ ಅಪಾದನೆಗೊಳಗಾಗಿ ಜೈಲಿನಲ್ಲಿದ್ದ ಕೈದಿಗಳಿಗೆ ಬಿಡುಗಡೆಯ ದಿನ ಸಮೀಪಿಸುತ್ತಿರುವ ಖುಷಿಯಾಗುತ್ತದೆ. ಆದರೆ ಸಮಾಜದಲ್ಲಿರುವ ನಿರಪರಾಧಿ ಕೈದಿಗಳ ಸ್ಥಿತಿ ಮಾತ್ರ ಇದಕ್ಕೆ ವಿರುದ್ಧವಾಗಿರುತ್ತದೆ.

ಕ್ಯಾಲೆಂಡರಿನ ಬಳಿಸಾರಿ ಆಕೆ ಮುಂದಿನ ತಾರೀಖುಗಳನ್ನು ತಿರುವಿ ಹಾಕತೊಡಗಿದಳು. ಇಪ್ಪತ್ನಾಲ್ಕು ಎಪ್ರಿಲ್, ಇಪ್ಪತ್ತೈದು ಎಪ್ರಿಲ್... ಏಳು

ಢಣ್-ಢಣ್-ಢಣ್

ಶಾಲೆಯ ಗಂಟೆ ಆ ಕರ್ಣ ಕಠೋರ ಸದ್ದು ಹುಡುಗಿಯರಿಗೆ ಬಹಳ ಮಧುರವಾಗಿ ಕೇಳಿಸಿತು. ಎಲ್ಲರ ಮುಖಗಳೂ ಖುಷಿಯಿಂದ ಅರಳಿದವು. ಪುಸ್ತಕಗಳ ಅವಸರದಿಂದ ಬ್ಯಾಗುಗಳಲ್ಲಿ ತುಂಬಿ, ಬೆಂಚಿನ ಕೆಳಗಿನ ಚಪ್ಪಲಿಗಳನ್ನು ಮೆಟ್ಟಿ ಅವರೆಲ್ಲ ಸರ್ರನೆ ಹೊರಗೆ ಹೋಗುವವರೇ! ಆದರೆ ಒಮ್ಮೆಲೆ ಅವರ ಗಮನಕ್ಕೆ ಬಂದಿತು. ಬಾಯಿ ('ಅಕ್ಕನವರು ಅಥವಾ ಟೀಚರು) ಇನ್ನೂ ಕುರ್ಚಿ ಬಿಟ್ಟು ಎದ್ದಿರಲಿಲ್ಲ. ಹುಡುಗಿಯರ ಚಂಚಲ ಕಣ್ಣ ನೋಟಗಳು ಒಮ್ಮೆಲೆ ನಿಶ್ಚಲವಾದವು. ತೋಟದಲ್ಲಿ ಹಾರಾಡುವ ಅಸಂಖ್ಯ ಪಾತರಗಿತ್ತಿಗಳ ಚಲನೆ ಒಂದು ಕ್ಷಣ ನಿಂತು ಹೋದಂತೆ ಸಿಂಧೂಗೆ ಅನಿಸಿತು.

ಆಕೆ ಕುರ್ಚಿಯಿಂದೆದ್ದು ನಗು ಮುಖದಿಂದ ಅಂದಳು, 'ನಡೆಯಿರಿ, ಇನ್ನು ನಮ್ಮ ಭೇಟಿಯಾಗುವುದು'

ಒಬ್ಬ ಧೈರ್ಯದ ಹುಡುಗಿ ಆಕೆಯ ಮಾತನ್ನು ಪೂರ್ತಿಗೊಳಿಸಿದಳು. 'ಜೂನ್ ಎಂಟರಂದು'!

ಸಿಂಧು ನಕ್ಕಳು. ನಗು ನಗುತ್ತ ಹೊರ ಬಿದ್ದ ಹುಡುಗಿಯರ ದಂಡವನ್ನು ನೋಡುತ್ತಿದ್ದಂತೆ ಆಕೆಗನಿಸಿತು. ಗೂಡಿನ ಬಾಗಿಲು ತೆರೆಯುತ್ತಲೇ ಪಾರಿವಾಳಗಳು ಹೀಗೆಯೇ ಹೊರ ಬರುತ್ತವೆ. ಅಲ್ಲವೆ? ಹಸಿರು ಸೀರೆಗಳು, ಕಪ್ಪು ಜಡೆಗಳು, ಗುಲಾಬಿ ಮುಖಗಳು, ನೀಲಿ ನೇರಳೆ ವರ್ಣದ ಫ್ರಾಕುಗಳು, ಹಲವಾರು ಕಾಮನ ಬಿಲ್ಲುಗಳು ಒಟ್ಟಾಗಿ ಕುಣಿಯುತ್ತ ತರಗತಿಯಿಂದ ಹೊರಬಿದ್ದಂತೆ.

ಕೊನೆಯ ಹುಡುಗಿ ಹೋಗುತ್ತಿದ್ದಂತೆ ತಿರುಗಿ ನೋಡಿ ನಕ್ಕು ಅಂದಳು. 'ಬಸ್ತಿಣಿ ಹ್ಯಾ ಬಾಯೀ.'

'ಬಾಯಿ ಕಳೆದ ಐದು ವರ್ಷ ದಿನಾ ಈ ಶಬ್ದ ಆಕೆಯ ಕಿವಿಯ ಮೇಲೆ ಬೀಳುತ್ತಿತ್ತು, ಆದರೆ ಇವತ್ತಿನಷ್ಟು ಅದು ಹಿಂದೆಂದೂ ಆಕೆಯನ್ನು ಚುಚ್ಚಿರಲಿಲ್ಲ.

ಆಕೆ ಸಹಜವಾಗಿ ಕೈಯಲ್ಲಿನ ವ್ಯಾನಿಟಿ ಬ್ಯಾಗ್ ತೆರೆದಳು. ಅದರಲ್ಲಿನ ಚಿಕ್ಕ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಿದ್ದಂತೆ ಆಕೆಗನಿಸಿತು. ಈ ಮರಾಠಿ ಭಾಷೆಯೇ ಮಹಾ ಅಡ್ನಾಡಿ. ಇಪ್ಪತ್ತೈದರ ತರುಣಿ ಶಿಕ್ಷಕಿಯಾದಳೆಂದ ಮಾತ್ರಕ್ಕೆ ಆಕೆಗೆ 'ಬಾಯೀ' ಅನ್ನುವುದೆ? ಛೆ ಮುಂದಿನ ಸಲ ಶಬ್ದಕೋಶ ತಯಾರಿಸುವಾಗ ಸಂಪಾದಕರಿಗೆ ಸ್ಪಷ್ಟ ಹೇಳಬೇಕು 'ಬಾಯೀ' ಅಂದರೆ ಐವತ್ತರ ಕನಿಷ್ಠ ನಾಲ್ವತ್ತರ ಗಡಿ ದಾಟಿದ ಹೆಣ್ಣು ಮಗಳು ಅಂತ ಅರ್ಥ ಇರಬೇಕು.

ಮೇ, ಒಂಬತ್ತು ಮೇ... ಐದು ಜೂನ್, ಆರು ಜೂನ್, ಏಳು ಜೂನ್! ಒಟ್ಟು ನಲವತ್ತೈದು ದಿನಗಳು. ಈ ದಿನಗಳಾದರೋ ತಣ್ಣಗಿನ ದಿನಗಳೇ? ಬೇಸಿಗೆಯ ಕಾಲದ ದಿನಗಳು! ನಸುಕಿನ ಐದು ಗಂಟೆಗೆ ಬೇಸಿಗೆಯ ಚುರುಕು ಮುಟ್ಟಿಸುವ ದಿನಗಳು. ಸಂಜೆ ಏಳೂವರೆಯಾದರೂ ಇನ್ನೂ ಬಿಸಿಲಿನ ಛಾಯೆ ಭೂಮಿಯನ್ನು ಆವರಿಸಿರುತ್ತದೆ. ಪ್ರಿಯಕರನು ಚುಂಬಿಸಿ ಹೊರಟು ಹೋದ ನಂತರವೂ ಪ್ರಿಯೆಯ ಮೌನದಲ್ಲಿ ಉಳಿಯುವ ಮಧುರ ತರಂಗದ ಹಾ.

ಸಿಂಧು ಬೆಚ್ಚಿ ಕ್ಯಾಲೆಂಡರಿನಿಂದ ದೂರ ಸರಿದಳು. ತನಗೆ ಹೊಳೆದ ಈ ಉಪಮೆಯಿಂದ ಆಕೆಗೆ ಆಶ್ಚರ್ಯವಾಯಿತು. ಆಕೆಯ ಒಳಮನಸ್ಸು ಅನ್ನುತ್ತಿತ್ತು. 'ಅದರಲ್ಲೇನಿದೆ ಅಂಥದು? ಇಂಥ ಉಪಮೆ ಹೊಳೆಯುವ ವಯಸ್ಸೇ ನಿನ್ನದು. ನೀನು ಶಿಕ್ಷಕಿಯೇನೋ ಹೌದು. ಆದರೆ ಸನ್ಯಾಸಿ ಅಲ್ಲವಲ್ಲ'.

ಆಕೆಗೆ ಪೂರಾ ಸಮಾಧಾನವಾಗಲೆಂದು ಬಾಹ್ಯ ಮನಸ್ಸು ಅಂದಿತು. 'ಈಚೆಗೆ ನೀನು ಬಹಳ ಕಾದಂಬರಿಗಳನ್ನು ಓದುತ್ತಿರುವಿ. ಅವುಗಳಲ್ಲಿನದೇ ಉಪಮೆಯಿರಬೇಕು ಇದು. ಮೊನ್ನೆ ಫಡಕೆಯವರ 'ಅಟಕ್ ಪಾರ್ ಓದಿದೆಯಲ್ಲ. ಅದರಲ್ಲಿ...'

ಆಕೆ ಕಿಡಿಕಿಯಿಂದ ಹೊರಗೆ ನೋಡಿದಳು. ಎದುರಿನ ಚಾಳಿನಲ್ಲಿ ಪೋಸ್ಟ್‌ಮನ್ ಹೋಗುತ್ತಿದ್ದ. ಎರಡನೆಯ ಅಂತಸ್ತಿನಲ್ಲಿ ತರುಣಿಯೋರ್ವಳು ಅವನನ್ನು ಕಂಡೊಡನೆ ಲಗುಬಗೆಯಿಂದ ಕೆಳಗೆ ಹೊರಟಳು ಸಿಂಧೂಗೆ ನೆನಪಾಯಿತು ಕಳೆದ ಮಾಘದಲ್ಲಷ್ಟೇ ಆಕೆಯ ಲಗ್ನವಾಗಿತ್ತು. ಆಗ ನಾಲ್ಕಾರು ದಿನ ತಾನು ಬೀದಿಯಲ್ಲಿ ಹಾಕಿದ್ದ ಮಂಟಪ ಹಾಯ್ದು ಹೋಗುತ್ತಿದ್ದಳು. ಲಗ್ನದ ಮುಹೂರ್ತ ಬೆಳಗಿನಲ್ಲೇ ಇದ್ದರೂ ತಾನು ತಪ್ಪಿಸಿಕೊಂಡಿದ್ದಳು. ಶಾಲೆಯ ಕೆಲಸ ನೆವ ಮಾಡಿದ್ದಳು.

ಸಿಂಧು ನೋಡುತ್ತಲೇ ಇದ್ದಳು ಆ ತರುಣಿ ಪೋಸ್ಟ್‌ಮಾನ್‌ನ ಕೈಯಲ್ಲಿನ ಪತ್ರವನ್ನು ಕಸಿದುಕೊಂಡಂತೆಯೇ ಇಸಿದುಕೊಂಡಳು. ತಕ್ಷಣ ಆಕೆಯ ಗಲ್ಲಗಳಲ್ಲಿ ಗುಲಾಬಿ ಅರಳಿದವು. ಆಕೆಯ ಗಂಡನದೇ ಇರಬೇಕು ಆ ಪತ್ರ.

ವಿಷಣ್ಣ ಮನಸಿನಿಂದ ಸಿಂಧು ಟೇಬಲ್ ಬಳಿ ಬಂದು ಕೂತಳು. ತನ್ನಷ್ಟಕ್ಕೆ ತಾನೇ ಅಂದುಕೊಂಡಳು. ತಿಂಗಳಾನುಗಟ್ಟಲೆ ಪೋಸ್ಟ್‌ಮನ್ ತನ್ನ ಬಾಗಿಲಿಗೆ ಬರುವುದಿಲ್ಲ. ತನಗೆ ಯಾರಿದ್ದಾರೆ ಪತ್ರ ಬರೆಯುವವರು? ತಾಯಿ, ಪಾಪ ಹಳ್ಳಿಯಲ್ಲಿದ್ದಾಳೆ. ಆಕೆಗೆ ಬರೆಯಲು ಬಾರದು. ಪ್ರತಿ ತಿಂಗಳು ಹತ್ತು ರೂಪಾಯಿ ಮನಿಯಾರ್ಡರು ಮಾಡಿದಾಗ ಅದು ತಲುಪಿದೆಯೆಂದು ತಿಳಿಸಲು ತಿರುಗಿ ಬರುವ ತಾಯಿಯ ಹೆಬ್ಬೆಟ್ಟಿನ ಗುರುತಿರುವ ತುಂಡು ಕಾಗದವೇ ತನ್ನೆಲ್ಲ ಪತ್ರ ವ್ಯವಹಾರ. ಮೊದಲಲ್ಲಿ ಕಾಲೇಜಿನ ಗೆಳತಿಯರ ಪತ್ರಗಳು ಬರುತ್ತಿದ್ದವು. ಆದರೆ ಅವರೆಲ್ಲ ಮದುವೆಯಾಗಿ ತಮ್ಮ ಸುಖೀ ಸಂಸಾರಗಳಲ್ಲಿ ಮಗ್ನರಾಗಿ ಹೋದರು. ಯಾರ ಮದುವೆಯಾಗಲಿಲ್ಲವೋ ಅವರಿಗೆ ತನ್ನಂತಹ ನಿರುಪಯುಕ್ತ ನಿಸ್ಸತ್ವ ಗೆಳತಿಯ ಗೊಡವೆಯೇಕಿರುತ್ತದೆ? ಆಕೆ ನೀಡಿದಾಗಿ ಉಸಿರು ಬಿಟ್ಟಳು.

ಆಕೆಗೆ ಕಾಲೇಜಿನ ದಿನಗಳು ನೆನಪಾದವು. ಆಗ ಆಕೆಗೆ ಗಂಡು ಹುಡುಗರಿಂದ ನಾಲ್ಕಾರು ಪ್ರೇಮ ಪತ್ರಗಳು ಬಂದಿದ್ದವು. ಆ ಹುಡುಗಾಟಿಕೆಗೆ ಉತ್ತರವೆಂಬಂತೆ ಆಕೆ ಆ ಪತ್ರಗಳನ್ನು ಹರಿದು ಚೂರಿ ಮಾಡಿ ಅವರವರಿಗೇ ತಿರುಗಿ ಕಳಿಸಿದ್ದಳು. ಈಗ ಅನಿಸುತ್ತದೆ ತನಗೆ ಯಾರಾದರೂ ಪ್ರೇಮ ಪತ್ರ ಬರೆಯಬಾರದೆ. ತಾನೀಗ ಅವನ್ನು ಹರಿದು ಹಾಕುವಳೆ... ಛೆ...

ಎಕ್ಸರಸಾಯಿಜ್ ಪುಸ್ತಕಗಳನ್ನು ತಪಾಸು ಮಾಡುವುದೇ ಬದುಕಲ್ಲ. ಹನ್ನೊಂದರಿಂದ ಐದವರೆಗೆ ಹುಡುಗಿರೆದುರು, ಗಿಳಿ ಪಾಠ ಮಾಡುವುದೇ ಜೀವನವಲ್ಲ. ಕಾಲೇಜಿನಲ್ಲಿದ್ದಾಗ ಆ ಜೋಗನ ಮದುವೆಯ ಬೇಡಿಕೆಯನ್ನು ತಾನು ಒಪ್ಪಿದ್ದರೆ...

ಒಪ್ಪಿದ್ದರೆ ಈಗ ಪ್ರತಿ ವರ್ಷ ಜೂನ್‌ರಿಂದ ಎಪ್ರಿಲ್‌ವರೆಗಿನ ಎಕ್ಸರಸಾಯಿಜ್ ಪುಸ್ತಕಗಳನ್ನು ತಪಾಸು ಮಾಡುತ್ತ ಕೂತಿರುವ ಈ ಕೈಗಳು ಯಾರದೋ ಧೋತರವನ್ನು ನಾಜೂಕಾಗಿ ನೆರಿಗೆ ಮಾಡಿಡುತ್ತ, ಯಾರದೋ ಮುದ್ದು ಮುಖಕ್ಕೆ ದೃಷ್ಟಿ ಬೊಟ್ಟು ಇಡುತ್ತ ಇರುತ್ತಲಿದ್ದವು.

ಆಕೆ ಅಸ್ವಸ್ಥಳಾಗಿ ಹಿಂತಿರುಗಿ ನೋಡಿದಳು. ಕ್ಯಾಲೆಂಡರಿನ ಎಪ್ರಿಲ್ ಇಪ್ಪತ್ತೂರು ಮತ್ತೆ ಕಾಣಿಸಿತು. ಆಕೆಗೆ ಜೂನ್ ಎಂಟು ನೆನಪಾಯಿತು. ನಲವತ್ತೈದು ದಿನಗಳು! ಪ್ರತಿ ದಿನಕ್ಕೆ ಇಪ್ಪತ್ನಾಲ್ಕು ಗಂಟೆಗಳು ಪ್ರತಿ ಗಂಟೆಗೆ ಅರವತ್ತು ನಿಮಿಷಗಳು ನಿಮಿಷಕ್ಕೆ ಅರವತ್ತು ಸೆಕೆಂಡುಗಳು... ಹೇಗೆ ಕಳೆಯುವುದು ಈ ಕಾಲವನ್ನು?

ಆಕೆ ಗಡಿಯಾರದ ಕಡೆ ನೋಡಿದಳು. ಟಿಕ್ ಟಿಕ್ ಸದ್ದು ಆಕೆಯ ಕಿವಿಯಲ್ಲಿ ಧ್ವನಿಸತೊಡಗಿತು.

ಆಕೆ ಟೇಬಲ್ ಕಡೆ ನೋಡಿದಳು. ನಟ್ಟ ನಡುವೆ ಆಕೆಯ ಫೋಟೋ ಇತ್ತು, ಆಕೆ ಶಿಕ್ಷಕಿಯಾದೊಡನೆ ತೆಗೆಸಿಕೊಂಡದ್ದು. ಬಲಗೈಗೆ ತೂಗುಬಿದ್ದ ಚೀಲದಿಂದ ಇಣಿಕಿ ನೋಡುವ ಪುಸ್ತಕಗಳು, ಎಡಗೈಯಲ್ಲಿನ ಕೈಗಡಿಯಾರದೆಡೆ ಬಗ್ಗಿ ನೋಡುವ ಆ ವೈಖರಿ.

ಟಿಕ್ ಟಿಕ್... ಮತ್ತೆ ಆಕೆಯ ಕಿವಿಗಳಲ್ಲಿ ದನಿ ಮೊಳಗತೊಡಗಿತು. ಆಕೆಗನಿಸಿತು. ಬಹಳ ವಿಚಾರ ಮಾಡಿ ತನ್ನ ತಲೆ ಹಗುರಾಗಿದೆ. ಅದಕ್ಕೇ ಈ ಗಡಿಯಾರದ ಸದ್ದು ಭಾರವೆನಿಸುತ್ತಿದೆ.

ಮತ್ತೆ ಜೋರಾಗಿ ಟಿಕ್ ಟಿಕ್ ಸದ್ದಾದಾಗ ಬಾಗಿಲ ಕಡೆ ಆಕೆಯ ಗಮನ ಹರಿಯಿತು. ಆಕೆ ಕೂಡಲೇ ಬಾಗಿ ತೆರೆದಳು. ಎದುರಿಗೆ ಪೋಸ್ಟ್‌ಮನ್ ನಿಂತಿದ್ದ.

ತನಗೆ ಪತ್ರವೇ?

ಆಕೆಯ ಹಣೆ ಗಂಟಿಕ್ಕಿತ್ತು. ಬಹುಶಃ ತಾಯಿಯ ಪತ್ರವಿರಬೇಕು. ಯಾರದೋ ಕಾಲು ಬಿದ್ದು ಬರೆಯಿಸಿರಬೇಕು 'ಈ ರಜೆಯಲ್ಲಾದರೂ ಮನೆಗೆ ಬಾ. ದೀಪಾವಳಿಗೆ ನೀನು ಬರಲಿಲ್ಲವೆಂದು ನನಗೆ ಬಹಳ ಕೆಟ್ಟೆನಿಸಿತು'.

ಮಗಳನ್ನು ನೋಡಬೇಕು. ಅವಳೊಂದಿಗೆ ಇರಬೇಕು. ಅಂತ ತಾಯಿಗೆ ಅನ್ನಿಸುವುದು ಸ್ವಾಭಾವಿಕ. ಆದರೆ ಆ ದರಿದ್ರ ಹಳ್ಳಿಯಲ್ಲಿ ಮಗಳು ಹೊತ್ತುಗಳೆಯುವುದು ಹೇಗೆ? 'ಕೇಸರಿ ಬಿಟ್ಟರೆ ಬೇರೆ ಪತ್ರಿಕೆಯೂ ಅಲ್ಲಿ ಸಿಗುವುದಿಲ್ಲ. ಮುಖಕ್ಕೆ ಬಳಿದುಕೊಳ್ಳುವ ಪೌಡರು ಮುಗಿದರೆ ಹಿಟ್ಟು ಮೆತ್ತಿಕೊಳ್ಳುವುದೇ ಗತಿ ಇನ್ನು ತಾಯಿಗೆ ಆರಾಮವಿರದಿದ್ದರಂತೂ ಒಲೆಯ ಹತ್ತಿರ ಕೂತು ಫುಸ್ ಫುಸ್ ಅಂತ ಊದುತ್ತ ಕಸರತ್ತು ಮಾಡದಿದ್ದರೆ ಹೊಟ್ಟೆಗೆ ಎರಡು ತುತ್ತು ಕೂಡಾ ಸಿಗುವುದೂ ಕಷ್ಟ.

ಮನಸ್ಸಿನಲ್ಲಿ ಹೀಗೆಲ್ಲ ಯೋಚಿಸುತ್ತಾ ಸಿಂಧೂ ಕೈಯಲ್ಲಿನ ಪತ್ರದ ಕಡೆ ನೋಡಿದಳು. ಅವಳ ಕಣ್ಣು ಕಾಗದದ ಕೆಳಗಡೆ ಇದ್ದ 'ನಿನ್ನ ಕುಂದಾ' ಎಂಬ ಶಬ್ದಗಳೆಡೆ ಹರಿಯುವುದೇ ....

ಆಕೆಯ ಕಣ್ಣುಗಳಲ್ಲಿ ವಿಲಕ್ಷಣ ಸಮಾಧಾನ ಕಂಡಿತು. ಲಗುಬಗೆಯಿಂದ ಒಳಬಂದು ಕೈಯಲ್ಲಿ ಪತ್ರವನ್ನು ಎಪ್ರಿಲ್ ಇಪ್ಪತ್ತೂರನೇ ತಾರೀಕಿಗೆ ತೋರಿಸುತ್ತ ಆಕೆಯೆಂದಳು. 'ಇನ್ನು ಇಲ್ಲಿ ನೀನೇ ರಾಜ್ಯ ಮಾಡಿಕೊಂಡಿರು. ನಾನು ಜೂನ್ ಎಂಟಕ್ಕೆ ಮುಂಜಾನೆ ತಿರುಗಿ ಬರುತ್ತೇನೆ.

ಕುಂದಾನ ಕಡೆ ಬಂದಾಗಿನಿಂದ ಸಿಂಧೂಗೆ ಹಗುರು ಹಗುರೆನ್ನಿಸುತ್ತಿತ್ತು. ಪಂಜರದಿಂದ ಬಿಡುಗಡೆಯಾದ ಹಕ್ಕಿ ಒಮ್ಮೆ ಈ ಗಿಡದ ಟೊಂಗೆಯ ಮೇಲೆ, ಇನ್ನೊಮ್ಮೆ ಬೇರೆ ಟೊಂಗೆ ಮೇಲೆ ಹಾರುತ್ತಾ,

ನಡುನಡುವೆ ಅಲ್ಲಲ್ಲಿ ಕುಟುಕುತ್ತ, ಕುಪ್ಪಳಿಸುವ ಹಾಗೆ ಆಕೆಯ ದಿನ ಕಳೆಯತೊಡಗಿದ್ದವು.

ಕಾಲೇಜಿನಲ್ಲಿದ್ದಾಗ ಕುಂದಾ ಆಕೆಯ ಜೀವಶ್ಚಕಂಠಶ್ಚ ಗೆಳತಿ. ಕಳೆದ ವರ್ಷಗಳಿಂದೀಚೆ ಒಮ್ಮೆಯೂ ಭೇಟಿಯಾಗಿರದಿದ್ದುದೂ ಈ ಭೇಟಿಯ ಅನಂತರ ಕಾರಣವಾಗಿತ್ತು. ಆದರೆ ಸಿಂಧೂಳ ಆನಂದಕ್ಕೆ ಅದಕ್ಕಿಂತ ಹೆಚ್ಚಿನ ಕಾರಣವೆಂದರೆ ಆಕೆ ಒಂದು ಸುಖೀ ಸಂಸಾರವನ್ನು ನೋಡುತ್ತಿದ್ದಳು.

ಕುಂದಾಳ ಕೋಣೆ ಅವಳ ಕೋಣೆಯಷ್ಟೇ ಇದ್ದಿತು. ಆದರೆ ಆ ಕೋಣೆಯಲ್ಲಿ ಟೇಬಲ್ ಮೇಲಿನ ಕುಂದಾ ಮತ್ತು ಬಾಲಚಂದ್ರರ ಸುಂದರವಾದ ಫೋಟೋ, ಕಾಗದದ ಹೂಗಳನ್ನಿರಿಸಿದ ಚೆಂದವಾದ ಹೂದಾನಿ, ಕಾವ್ಯ ಕಾದಂಬರಿ ಇತ್ಯಾದಿ ಪುಸ್ತಕಗಳು ಮತ್ತು ಕುಂದಾಳ ಅಲಂಕಾರ ಪ್ರಸಾಧನಗಳು ಇವಿಷ್ಟೇ ಇದ್ದವು. ಎಕ್ಸರ್‌ಸೈಜ್ ಪುಸ್ತಕಗಳು, ನೋಟ್ಸ್‌ಗಳು, ಕೆಂಪು ನೀಲಿ ಪೆನ್ಸಿಲ್‌ಗಳು, ರಬ್ಬರು, ಕೆಂಪು ಮಸಿ ದೌತಿ ಇಂತಹ ಯಾವ ಬಾನಗಡಿಯೂ ಅಲ್ಲಿರಲಿಲ್ಲ. ಈ ಟೇಬಲ್ ನೋಡಿದಾಗ ಯಾವುದೇ ಹಾಳು ಅಡವಿಯಿಂದ ಸುಂದರವಾದ ತೋಟಕ್ಕೆ ಬಂದ ಹಾಗೆ ಸಿಂಧೂಗೆ ಅನಿಸುತ್ತಿತ್ತು. ಆಕೆ ಮನಸ್ಸಿನಲ್ಲಿ ಅಂದುಕೊಂಡಳು. 'ಕುಂದಾ ಬಹಳ ಭಾಗ್ಯಶಾಲಿ'.

ಮುಂದೆ ಒಂದೂ ಕಾಲು ತಿಂಗಳ ಕಾಲ ಪ್ರತಿದಿನವೂ ಆಕೆ ಇದೇ ಮಾತನ್ನು ದಿವೂ ಅಂದುಕೊಳ್ಳುತ್ತಿದ್ದಳು.

ಒಂದು ದಿನ ಕುಂದಾಗೆ ಮೈ ಸರಿಯಿರದಿದ್ದರಿಂದ ಸಿಂಧೂಗೆ ಒಬ್ಬಳೇ ಬೆಳಗಿನ ವಾಕಿಂಗ್‌ಗೆ ಹೋದಳು. ಬೇಗ ಚಹಾ ಮಾಡಬೇಕೆಂದು ನೆನಪಾಗಿ ಆಗಲೇ ತಿರುಗಿ ಬಂದಳು. ಬಾಲಚಂದ್ರ ಬೇಗ ಏಳುವುದಿಲ್ಲವೆಂದು ಅವಳಿಗೆ ಗೊತ್ತಿತ್ತು. ಆದರೆ ಆಕೆ ಮನೆಗೆ ಬಂದು ನೋಡುತ್ತಾಳೆ. ಬಾಲಚಂದ್ರ ಕುಂದಾಳ ಹಾಸಿಗೆಯಲ್ಲಿ ಕೂತು ಆಕೆಗೆ ಚಹಾ ಕುಡಿಯುವಂತೆ ಒತ್ತಾಯಿಸುತ್ತಿದ್ದಾನೆ. ಏನು ಮಾಡಿದರೂ ಕುಂದಾ ಏಳಲೊಲ್ಲಳು. ಕೊನೆಗೆ ಆತನೆಂದ. 'ಚಿಕ್ಕ ಮಕ್ಕಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಬುದ್ದಿಯಿಂದ ಹಾಲು ಕುಡಿಸುತ್ತಾರಲ್ಲ, ಹಾಗೇ ಮಾಡುತ್ತೇನೆ ನೋಡು...

ಅದೇ ಹೊತ್ತಿಗೆ ಸಿಂಧೂ ಕೋಣೆಯಲ್ಲಿ ಪ್ರವೇಶಿಸಿದ್ದರಿಂದ ಬಾಲಚಂದ್ರ ಎದ್ದು ನಿಂತ, ಇಲ್ಲದಿದ್ದರೆ ಆತ ಕುಂದಾಳ ಮೇಲೆ ಆ ಹೊಸ ಮಾಧ್ಯಂರ ಪ್ರಯೋಗವನ್ನು ಮಾಡಿಯೇ ಬಿಡುತ್ತಿದ್ದನೇನೋ. ನಗು ನಗುತ್ತ ಆತ ಹೊರಟು ಹೋದ. ಕುಂದಾ ಮಾತ್ರ ಅಳುಮುಖದಿಂದಲೇ ಎದ್ದು ಕೂತಳು. ಸಿಂಧು ಅಂದುಕೊಂಡಳು. ಈ ಕುಂದಾ ಮಹಾ ಸೋಗಲಾಡಿ. ಇದೇ ಈಗ ನಡೆದ ಘಟನೆಯ ಬಗ್ಗೆ ತಾನು ತಮಾಷೆ ಮಾಡಬಾರದೆಂದು ಬೇಕೆಂದೇ ತಲೆ ನೋವಿನ ನೆಪ ಹೂಡಿ ಮುಖ ಚಿಕ್ಕದು ಮಾಡಿಕೊಂಡಿದ್ದಾಳೆ.

ಅವರಿಬ್ಬರೊಂದಿಗೆ ಸಿನಿಮಾಗೆ ಹೋದಾಗಲೂ ಸಿಂಧೂಗೆ ಇದೇ ಅನುಭವವಾಗುತ್ತಿತ್ತು. ಎದುರಿಗಿನ ಸಿನಿಮಾಗಿಂತ ಮಗ್ಗುಲಲ್ಲೇ ನಡೆದ ಸಿನಿಮಾ ಹೆಚ್ಚು ಸ್ವಾರಸ್ಯಕರವೆನ್ನಿಸುತ್ತಿತ್ತು. ಇದು ಮೂರೇ ಸಿನಿಮಾ, ನಿಜ, ಆದರೆ ಚಿಕ್ಕ ಚಿಕ್ಕ ನಾಜೂಕಾದ ಚೇಷ್ಟೆಗಳಿಂದಾಗಿ ಇದರ ರುಚಿ ಹೆಚ್ಚುತ್ತಿತ್ತು. ಒಮ್ಮೆ ಥಿಯೇಟರಿನಲ್ಲಿ ಕೂತಿದ್ದಾಗಲೇ ಕುಂದಾಗೆ ಕೆಮ್ಮು ಬಂದಿತು. ತಕ್ಷಣ ಕಿಸೆಯಲ್ಲಿಂದ ಲವಂಗ ತೆಗೆದು ಅವಳಿಗೆ ಕೊಡುತ್ತ ಬಾಲಚಂದ್ರನೆಂದ, 'ಒಂದೇ ಲವಂಗ ಇದೆ. ಹ್ಞಾ, ನನಗೂ ಕೆಮ್ಮು ಬರುವ ಲಕ್ಷಣ ಕಾಣುತ್ತಿದೆ. ಅದರಲ್ಲಿ ಅರ್ಧ ನೀನು ಕಚ್ಚಿಕೊಂಡು ತಿನ್ನು, ಇನ್ನರ್ಧ ನನಗೆ ಕೊಡು.'

ಈಚೆಗೆ ಕುಂದಾ ಐದು ಮೊಳದ ಪತ್ತಲ ಉಡತೊಡಗಿದ್ದು ಕಂಡು ಸಿಂಧೂಗೆ ಕೌತುಕವೆನಿಸಿತು. ಕಾಲೇಜಿನಲ್ಲಿದ್ದಾಗ ಆಕೆ ಅನ್ನುತ್ತಿದ್ದಳು. 'ನಾನು ಹಳೆಯ ಸಂಪ್ರದಾಯದವಳು. ನನಗೆ ಈ ಐದು ಮೊಳದ ಗೋಲು ಸೀರೆ ಸೇರುವುದಿಲ್ಲ. ಆ ನೆನಪಾಗಿ ಸಿಂಧೂ ಕುಂದಾಳನ್ನು ಪ್ರಶ್ನಿಸಿದಾಗ ಆಕೆ ನಕ್ಕು ಹೇಳಿದಳು, 'ಈಗಲೂ ನನಗೆ ಗೋಲು ಸೀರೆ ಸೇರುವುದಿಲ್ಲ'.

'ಹೌದೇನು?'

'ನಿಜವಾಗಿ ಹೇಳುತ್ತೇನೆ'

'ಮತ್ತೇನು ಬಟ್ಟೆ ಅಂಗಡಿಯವರು ನಿನ್ನ ಅಭಿಪ್ರಾಯ ಕೇಳಲೆಂದು ನಿನಗೆ ಐದು ಮೊಳದ (ಗೋಲು) ಸೀರೆ ಕಳಿಸುತ್ತಾರೇನು?'

'ಹಾಗಲ್ಲವೆ'

'ಮತ್ತೆ ನಿಮ್ಮ ಮಹಿಳಾ ಪರಿಷತ್ತಿನಲ್ಲಿ ಹೀಗೇನಾದರೂ ಗೊತ್ತುವಳಿ ಪಾಸಾಗಿದೆಯೇನು?'

'ಏನಂತ?'

'ಎಲ್ಲಾ ಮಹಿಳೆಯರು ಗೋಲು ಉಡಲೇಬೇಕು ಅಂತ?'

'ಮಹಾ ತುಂಟಿ ಕಣೇ ನೀನು'.

'ಮತ್ತೆ ನೀನು? ಮಹಾ ಕಳ್ಳಿ ಇದ್ದೀ. ಗೋಲು ಸೀರೆ ಉಡುವುದು ಇಷ್ಟವಾಗತೊಡಗಿದೆ. ಅಂತ ಸೀದಾ ಒಪ್ಪಿಕೊಳ್ಳಲು ತಯಾರಿಲ್ಲವಲ್ಲ?'

'ಖರೇನೇ ನನಗಿದು ಸೇರುವುದಿಲ್ಲ ಆದರೆ 'ಕುಂದಾ ಮಾತಾಡುತ್ತಿದ್ದಂತೆ ನಾಚಿ ನಿಲ್ಲಿಸಿದಳು. ಆ ಕ್ಷಣದಷ್ಟೆ ಆಕೆಯ ಕೆನ್ನೆಯಲ್ಲಿ ಮೂಡಿ ಮಾಯವಾದ ಗುಲಾಬಿ ಛಳಕನ್ನು ಕಂಡು ಸಿಂಧೂಗೆ ಅನಿಸಿತು. ಹೆಂಡತಿಯ ಮುಖದಲ್ಲಿ ಅರುಣರಾಗ ಮೂಡಿಸುವ ಕಲೆ ಗಂಡನ ಪ್ರೀತಿಗೆ ಅವಗತವಾಗಿರುವುದರಿಂದಲೇ ಸಂಸಾರವು ಪ್ರಾತಃಕಾಲದ ಹಾಗೆ ಪ್ರಸನ್ನವೆನ್ನಿಸುವುದು.

ಕುಂದಾ ಮುಂದೆ ಏನೂ ಮಾತಾಡಲಿಲ್ಲ. ಆದರೆ ಬಾಲಚಂದ್ರನಿಗೆ ಇಷ್ಟವೆಂಬ ಕಾರಣಕ್ಕಾಗಿಯೇ ಆಕೆ ಗೋಲು ಉಡತೊಡಗಿದ್ದಾಳೆಂಬುದು ಸ್ಪಷ್ಟವಿತ್ತು.

ಒಂದು ದಿನ ಸಿಂಧೂಗೆ ತನ್ನ ಬಾಚಣಿಕೆ ಕಾಣಲೊಲ್ಲದು. ಅವಸರದಲ್ಲಿ ಕುಂದಾ ಅದನ್ನು ಎಲ್ಲೋ ಇಟ್ಟಿರಬೇಕೆಂದು ಸಿಂಧೂ ಟೇಬಲಿನ ಒಂದು ಡ್ರಾ ಎಳೆದಳು. ಅಲ್ಲಿ ಬಾಚಣಿಕೆಯಿರಲಿಲ್ಲ. ಆದರೆ ಅನೇಕ ವಸ್ತುಗಳ ಜೊತೆ ಇರಿಸಿದ್ದ ಒಂದು ಪತ್ರ ಕಾಣಿಸಿತು. ಸಿಂಧೂಳ ಜಿಜ್ಞಾಸೆ ಜಾಗ್ರತವಾಯಿತು. ಪತ್ರದ ಕೆಳಗೆ 'ನಿನ್ನವನೇ-ಬಾಲಚಂದ್ರ' ಎಂದಿತ್ತು. ಪತ್ರ ಓದುವ ಅದಮ್ಯ ಆಕಾಂಕ್ಷೆ ಅವಳಿಗುಂಟಾಯಿತು. ಪತ್ರ ಮುಗಿಸಿ ಆಕೆ ಆಚೀಚೆ ನೋಡಿದಳು. ಗೆಳತಿಗೆ ಬಂದ ಪ್ರೇಮ ಪತ್ರವನ್ನೋದುವುದು ಒಂದು ರೀತಿಯ ಅಪರಾಧವೇ ಆದರೆ

ಒಂದು ವೇಳೆ ಕುಂದಾಗೆ ಒಂದು ಪುಟ್ಟ ಮಗುವಿದಿದ್ದರೆ ತಾನದನ್ನು ಮುದ್ದಿಸಿ ಆನಂದಿಸುತ್ತಿರಲಿಲ್ಲವೇ ಈ ಪತ್ರವೂ ಹಾಗೆಯೇ ಅದರ ಮೇಲಿನ ಹಕ್ಕೂ ಕುಂದಾಳದ್ದು ಹಾಗಂತ ತಾನದನ್ನು ಓದಬಾರದೆಂದೇನೂ ಇಲ್ಲವಲ್ಲ.

ಆ ಪತ್ರ ಓದಿದಾಗ ಆಕೆಗೆ ಬೆಳದಿಂಗಳ ಸಮುದ್ರದಲ್ಲಿ ತೇಲಾಡುತ್ತಿರುವಂತೆನಿಸಿತು. ಅದರಲ್ಲಿನ ಕೆಲವು ವಾಕ್ಯಗಳಂತೂ ತಿರುತಿರುಗಿ ನೆನಪಾಗುತ್ತಿದ್ದವು. ಎರಡು ಮೂರು ತಿಂಗಳ ಹಿಂದೆ ಕುಂದಾ ತವರಿಗೆ ಹೋಗಿದ್ದಾಗ ಬಾಲಚಂದ್ರ ಆಕೆಗೆ ಬರೆದಿದ್ದ ಪತ್ರವದು. ಅದರಲ್ಲಿ ತನದೊಂದು ತಕರಾರು ಇತ್ತು. 'ಕುಂದಾ, ಒಂದರಲ್ಲಿ ಇನ್ನೊಂದು ಕೂಡಿಸಿದರೆ ಎರಡಾಗುತ್ತದೆ ಅಂತ ಚಿಕ್ಕಂದಿನಲ್ಲಿ ಶಾಲೆಯಲ್ಲಿ ಕಲಿತಿದ್ದೆ. ಆದರೆ ತಪ್ಪು. ಈಚಿನ ನನ್ನ ಅನುಭವದಿಂದ ನಾನು ಕಲಿತಿದ್ದೇನೆಂದರೆ ಒಂದರಲ್ಲಿ ಇನ್ನೊಂದು ಕೂಡಿದರೆ ಇಡಿಯ ಜಗತ್ತು ಆಗುತ್ತದೆ. ಅದರಲ್ಲಿ ಯಾವುದೇ ಒಂದನ್ನು ಕಳೆದರೂ ಇನ್ನೊಂದರ ಬೆಲೆ ಶೂನ್ಯವಾಗುತ್ತದೆ.

ಬಾಲಚಂದ್ರ ಯಾವುದೋ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದ. ಹೀಗಾಗಿ ತನ್ನ ಪ್ರೇಮವನ್ನು ಬೇರೀಜು ಮಹಾ ಬಾಕಿಯ ರೂಪದಲ್ಲಿ ವ್ಯಕ್ತಪಡಿಸಿದ್ದ. ಈ ಪ್ರೇಮದ ಗಣಿತ ಅಷ್ಟು ಮಧುರವಾಗಿದೆ. ತಾನು ತರಗತಿಯಲ್ಲಿ ಕಲಿಸುವಾಗ ಕೊಡುವ ಆ

ಉದಾಹರಣೆಗಳೋ ಮತ್ತು ಬ ಕೆಲಸಕ್ಕೆ ಹೋಗುತ್ತಾರೆ. ನಡುವೆಯೇ ಬ ಕೆಲಸ ಬಿಡುತ್ತಾನೆ. 'ಛೀ, ಛೀ ಕುಂದಾ ಬಹಳೇ ಭಾಗ್ಯ ಶಾಲಿ. ಅದಕ್ಕೇ ಆಕೆಗೆ ಪ್ರೀತಿಸುವ ಗಂಡ ಸಿಕ್ಕಿದ್ದಾನೆ.

ತಿಂಗಳಿಡೀ ಆಕೆ ಹೀಗೆ ಮನಸ್ಸಿನಲ್ಲೇ ಕುಂದಾನ ಬಗ್ಗೆ ಕೌತುಕಪಡುತ್ತಿದ್ದಳು. ಕೊನೆಗೊಮ್ಮೆ ಕುಂದಾನ ಎದುರಿಗೆ ಅದನ್ನು ವ್ಯಕ್ತಗೊಳಿಸಬೇಕೆಂದು ಆಕೆಗೆ ತೀವ್ರವಾಗಿ ಅನಿಸಿತು. ಆಗ ಮಾತಾಡುತ್ತಿದ್ದಾಗ ಆಕೆಯೆಂದಳು. 'ನೀನು ಬಹಳ ಭಾಗ್ಯಶಾಲಿಯಾಗಿರುವಿ ಕುಂದಾ' ತನ್ನ ಮಾತು ಕೇಳಿ ಕುಂದಾ ಸಂತೋಷಪಡಬಹುದೆಂದು ಆಕೆಗೆ ಅನಿಸಿತ್ತು. ಆದರೆ ಕುಂದಾ ಆಕೆಯ ಕಡೆ ವಿಚಿತ್ರವಾಗಿ ನೋಡಿದಳು. ಆಕೆ ಉತ್ತರಿಸುವ ಮೊದಲೇ ಬಾಲಚಂದ್ರ ಒಂದು ಪತ್ರ ತೆಗೆದುಕೊಂಡು ಬಂದ. ಆಕೆ ಬರೆದಿದ್ದಳು. ನೀನು ನಾಳೆಯೇ ಇಲ್ಲಿಗೆ ಹೊರಟು ಬರಬೇಕು. ನನಗೆ ಬಹಳ ಮಹತ್ವದ ಕೆಲಸವಿದೆ. ಬಾಲಚಂದ್ರ ಪಂತರಿಂದ ಹದಿನೈದು ದಿನಗಳ ರಜೆ ಕೇಳಿ ಪಡೆದುಕೋ. ರಜೆ ಇಲ್ಲ ಅಂತ ಅವರೆಂದರೆ ಯಾರಾದರೂ ಡಾಕ್ಟರರ ಸರ್ಟಿಫಿಕೇಟು ತೋರಿಸು. ಅದರ ಹಣ ನಾನ ಕೊಡುವೆ. ಒಟ್ಟಿನಲ್ಲಿ ನೀನು ಬರಬೇಕು. ನನ್ನ ಮೇಲಾಣೆ. ನನ್ನದಷ್ಟೇ ಅಲ್ಲ. ನನ್ನ ಎರಡು ಗಂಡು ಮಕ್ಕಳು ಹಾಗೂ ಚಿಕ್ಕ ಹೆಣ್ಣು ಮಗುವಿನದೂ ಆಣೆ.'

ಕುಂದಾ ಹೊರಡುವ ತಯಾರಿ ನಡೆಸಿದಳು. ತನ್ನ ಜೊತೆಗೇ ಬಾ ಅಂತ ಸಿಂಧೂಗೆ ಒತ್ತಾಯಿಸಿದಳು. ಆದರೆ ಸಿಂಧೂ ಎಂದೂ ಮಂಜೂಳನ್ನು ನೋಡಿರಲಿಲ್ಲ. ಬೇರೆಯವರ ಮನೆಗೆ ಹೋಗುವುದು ಆಕೆಗೆ ಸರಿಯೆನಿಸಲಿಲ್ಲ. ಆಕೆ ಕುಂದಾಗೆ ಹೇಳಿದಳು, 'ಹೇಗಿದ್ದರೂ ಇನ್ನು ನಾಲ್ಕಾರು ದಿನವಾದ ಮೇಲೆ ನಾನು ಹೋಗುವವಳೇ ಇದ್ದೆ. ಸ್ವಲ್ಪ ಮುಂಚಿತವಾಗಿ ಹೋಗುವೆ, ಅಷ್ಟೆ'.

ಕುಂದಾನಿಂದ ಬೀಳ್ಕೊಳ್ಳುವಾಗ ಸಿಂಧು ಅಂದಳು. 'ನಾನಿಲ್ಲಿ ಬಹಳ ಖುಷಿಯಿಂದ ಇದ್ದೆ. ಈ ನೆನಪಿಗಾಗಿ' ತುಸು ತಡೆದು ಕೇಳಿದಳು 'ನಿನ್ನ ಟೇಬಲ್ ಮೇಲೆ ನಿಮ್ಮಿಬ್ಬರ ಫೋಟೋ ಇದೆಯಲ್ಲ, ಇದರ ಇನ್ನೊಂದು ಪ್ರತಿ ಇದೆಯೇ?'

ಕುಂದಾ ಇಲ್ಲವೆಂದಳು. ಆದರೆ ಸಿಂಧು ತಲೆ ತಗ್ಗಿಸಿದ್ದು ಗಮನಿಸಿ ಆಕೆಯೆಂದಳು, ನಿನಗೆ ಆ ಫೋಟೋ ಬೇಕೆ ತಗೊಂಡು ಹೋಗು. ಅದನ್ನೆತ್ತಿ ಎಲ್ಲಾದರೂ ಟ್ರಂಕಿನಲ್ಲಿ ಬಿಡುಕಬೇಕೆಂದಿದ್ದೆ.

ತಿರುಗಿ ಊರಿಗೆ ಬಂದ ಮೇಲೆ ಸಿಂಧೂ ಕ್ಯಾಲೆಂಡಿನ ಎಪ್ರಿಲ್ ಬದಲಿಸಲಿಲ್ಲ. ಜೂನ್ ಏಳರ ತನಕ ಇದೇ ತಾರೀಕು ಇದ್ದುಕೊಂಡಿರಲಿ.

ಆಕೆ ಏಕಾಕಿ ಜೀವನ ಮತ್ತೆ ಸುರುವಾಯಿತು. ಕುಂದಾನ ಮನೆ ನಂತರ ಈ ಜೀವನ ಬಗ್ಗೆ ಆಕೆಗೆ ಇನ್ನೂ ಹೆಚ್ಚು ಬೇಸರವಾಗತೊಡಗಿತು. ಏಳುವುದು, ಒಂದು ಕಪ್ ಚಹಾ ಮಾಡುವುದು, ಒಬ್ಬಳೇ ತಿರುಗಾಡಲು ಹೋಗುವುದು... ಈ ಏಕಾಕೀತನ ಆಕೆಯನ್ನು ಬೆಂಕಿಯಂತೆ ಸುಡತೊಡಗಿತು. ಆಕೆ ಹೊಸ ಹೊಸ ಪುಸ್ತಕಗಳನ್ನು ತಂದು ಓದುವ ಪ್ರಯತ್ನ ಮಾಡಿದಳು. ಆದರೆ ಹತ್ತಾರು ಪುಟಗಳಿಗಿಂತ ಹೆಚ್ಚಿಗೆ ಓದಲು ಆಗಲೇ ಇಲ್ಲ. ಬೇಸರ ಬಂದು ಪುಸ್ತಕ ಮುಚ್ಚಿ ಟೇಬಲ್ ಮೇಲಿರಿಸಿದ ಕುಂದಾ ಬಾಲಚಂದ್ರರ ಫೋಟೋ ನೋಡುತ್ತ ಕೂಡುತ್ತಿದ್ದಳು. ನೋಡನೋಡುತ್ತ ಆಕೆಗೆ ಕುಂದಾನ ಸ್ಥಳದಲ್ಲಿ ತನ್ನದೇ ರೂಪ ಕಾಣತೊಡಗುತ್ತಿತ್ತು. ಆದರೆ ಬಾಲಚಂದ್ರನ ಸ್ಥಳದಲ್ಲಿ ಮಾತ್ರ ಆಕೆ ಎಷ್ಟೇ ಪ್ರಯತ್ನ ಮಾಡಿದರೂ ಶೂನ್ಯವೇ ಕಾಣುತ್ತಿತ್ತು.

ಜೂನ್ ಐದರಂದು ಆಕೆಗೆ ಕುಂದಾ ಪತ್ರ ಬಂದಿತು. ಆಕೆ ಬರೆದಿದ್ದಳು., 'ನನ್ನ ಚಿಕಮ್ಮನ ಮಗಳು ಮಂಜೂ ನಿನ್ನ ಊರಿಗೆ ಬರುತ್ತಿದ್ದಾಳೆ. ಆಕೆಯ ಅತ್ತೆ ಮನೆಯ ಬಳಗದ ಪೈಕಿ ಯಾರದೋ ಲಗ್ನವಿದೆಯಂತೆ. ಆಕೆಗೆ ನಿನ್ನ ವಿಳಾಸ ಕೊಟ್ಟಿದ್ದೇನೆ. ಆಕೆ ಮಹಾ ಮಾತಿನ ಮಲ್ಲಿ. ಹುಷಾರೂ ಇದ್ದಾಳೆ. ನಿನ್ನ ಪರಿಚಯ ಮಾಡಿಕೊಳ್ಳಬೇಕೆಂದು ಆಕೆಗೆ ಬಹಳ ಆಸೆ. ಐದು ನಿಮಿಷಗಳಲ್ಲೇ ಆಕೆ ನಿನ್ನ ಐದು ವರ್ಷಗಳ ಗೆಳತಿಯಾಗಿ ಬಿಡುತ್ತಾಳೆ. ನಿನ್ನನ್ನು ಬಹುವಚನದಲ್ಲಿ ಸಂಬೋಧಿಸಬಾರದೆಂದು ಆಕೆ ಮೊದಲೇ ಠರಾಯಿಸಿಬಿಟ್ಟಿದ್ದಾಳೆ. ನಿನ್ನ ಜೊತೆ ಒಂದು ದಿನದ ಮಟ್ಟಿಗಾದರೂ ಇರು ಅಂತ ನಾನು ಆಕೆಗೆ ಹೇಳಿದ್ದೇನೆ. ಜೂನ್ ಎಂಟರಂದು ಆಕೆ ಊರಿಗೆ ತಿರುಗಿ ಬರುತ್ತಾಳೆ. ನಿನ್ನ ಕಡೆ ಜೂನ್ ಏಳರಂದು ಬಂದಾಳು. ನಿನಗೆ ನಾನೂ ಆಕೆಯೂ ಬೇರೆ ಬೇರೆ ಅಲ್ಲ.

'ನಾನೂ ಆಕೆಯೂ ಬೇರೆಯಲ್ಲ ಅಂತೇನೋ ನಾನು ಬರೆದೆ. ಆದರೆ ಮಂಜೂನ ಭಾಗ್ಯ ನನಗೆಲ್ಲಿ? ಆಕೆಯ ಎರಡೂ ಮಕ್ಕಳನ್ನು ನೋಡಿದಾಗ ನನಗೆ ಎಲ್ಲ ಮರೆತು ಹೋಗುತ್ತದೆ. ನನ್ನ ಲಗ್ನವಾದ ಎರಡೇ ತಿಂಗಳಿಗೆ ಆಕೆಯ ಲಗ್ನವಾಯಿತು. ಇಷ್ಟರಲ್ಲಿ ಆಕೆ ಮೂರು ಮಕ್ಕಳ ತಾಯಿಯಾದಳು. ನಾನು ಮಾತ್ರ.

'ಮಕ್ಕಳನ್ನು ನನ್ನೊಂದಿಗೆ ಬಿಟ್ಟು ಮಂಜೂ ಲಗ್ನಕ್ಕೆ ಹೋಗುವವಳಿದ್ದಾಳೆ. ಪುಟ್ಟ ಹೆಣ್ಣು ಮಗವನ್ನೂ ಸಹ. ಎಂತಹ ತುಂಟ ಮಗು ಅಂತೀ! ನಾನೇ ತನ್ನ ತಾಯಿ ಎಂತನಿಸುತ್ತದೇನೋ ಮಗುವಿಗೆ. ನಾನು ಎತ್ತಿಕೊಂಡ ಕೂಡಲೇ ಹಾಲುಕುಡಿಯಲೆಂದು ನನ್ನ ಸೆರಗನ್ನು ಸರಿಸತೊಡಗಿತು. ಇಂತಹ ಪ್ರಸಂಗದಲ್ಲಿ ನನ್ನ ಮನಸ್ಸಿನಲ್ಲಿ ಎಂತಹ ತಾಕಲಾಟವಾಗುತ್ತದೆಂದು ಬೇರೆಯವರಿಗೆ ಹೇಗೆ ತಿಳಿದೀತು..

'ಬಾಲಚಂದ್ರ ಪಂತರು ನನ್ನನ್ನು ಬಹಳ ಪ್ರೀತಿಸುತ್ತಾರೆ. ಆದರೆ ಸಿಂಧೂ, ನಿನಗೆ ನಿಜ ಹೇಳಲೇ ಕೇವಲ ಗಂಡನ ಪ್ರೀತಿಯಿಂದ ಹೆಂಡತಿಗೆ ಸಮಾಧಾನವಾಗುವುದಿಲ್ಲ. ಸುಂದರವಾದ ಬಳ್ಳಿಯೊಂದಕ್ಕೆ ತುಂಬ ಹಸಿರೆಲೆಗಳು, ಆದರೆ ಒಂದು ಹೂವು ಇಲ್ಲ ಹೀಗಾದರೆ ನನ್ನ ಬಾಳು. ನೀನೊಮ್ಮೆ ಅಂದಿದ್ದಿ 'ಕುಂದಾ, ನೀನು ಬಹಳ ಭಾಗ್ಯಶಾಲಿ' ಅಂತ. ಆದರೆ ನನಗನಿಸುತ್ತದೆ ಮಂಜು ನಿಜವಾಗಿ ಭಾಗ್ಯಶಾಲಿ. ಆಕೆಗೆ ದೇವರು ಯಾತರಲ್ಲೂ ಕಡಿಮೆ ಮಾಡಿಲ್ಲ. ಜೂನ್ ಏಳರಂದು ಆಕೆ ಹೇಗೆ ನಿನ್ನ ರೂಮಿಗೆ ನಗು ನಗುತ್ತಾ ಬರುತ್ತಾಳೆ ನೋಡುತ್ತೀರು'.

ಕುಂದಾ ನಿಜವನ್ನೇ ಬರೆದಿದ್ದಳು. ಜೂನ್ ಏಳರಂದು ಸಂಜೆ ಐದೇ ನಿಮಿಷದಲ್ಲಿ ಸಿಂಧೂಗೆ ಇದು ತಿಳಿದು ಬಿಟ್ಟಿತು. ಮಂಜೂ 'ನಮಸ್ಕಾರ ಸಿಂಧು ತಾಯಿ' ಅಂತನ್ನುತ್ತಾ, ಆಕೆಯಕೋಣೆಯಲ್ಲಿ ಕಾಲಿರಿಸಿದಳು ಒಂದು ಕ್ಷಣ ನಿಂತಲ್ಲಿ ನಿಲ್ಲುತ್ತಿರಲಿಲ. ಆಕೆ ಸುತ್ತೆಲ್ಲ ಓಡಾಡಿ ನೋಡಿದಳು. ಸಿಂಧೂನ ಟೇಬಲಿಗೆ ಕೂತು ತಾನೇ ನಾಲ್ಕಾರು ಕಡೆ ಸಹಿ ಮಾಡಿದಳು. ಎಲ್ಲಾ ಪುಸ್ತಕಗಳನ್ನೂ ತಿರವು ಹಾಕಿದಳು, ಕಾಟಿನ ಮೇಲೆ ಕೂತು ಹಾಸಿಗೆ ತೊಯ್ಯುಲ್ಲ ಹೊಲಸ್‌ಗಿಲ್ಲವೆಂದು ಖುಷಿ ವ್ಯಕ್ತಪಡಿಸಿದಳು. ಮತ್ತು ಕೊನೆಗೆ ಎಪ್ರಿಲ್ ಇಪ್ಪತ್ತ ಮೂರನ್ನು ಕಂಡು ಉದ್ಗರಿಸಿದಳು. 'ಅರೆ, ಇದೇನು? ನಿನ್ನಂತಹ ವಿದುಷಿ ಇಡೀ ಜಗತ್ತಿಗಿಂತ ಮುಂದೆ ಹೋಗಬೇಕು. ಹೀಗೆ ಹಿಂದೆ ಉಳಿದರೆ ನಡೆಯುವುದಿಲ್ಲ. ಆಕೆ ಸರಸರನೆ ತಾರೀಖುಗಳ ಕಾಗದಗಳನ್ನು ಕಿತ್ತಿ ಹರಿದು ಹಾಕಿದಳು. ಕೊನೆಗೆ ಜೂನ್ ಏಳರ ಕಾಗದವನ್ನು ಹರಿದು ಹೇಳಿದಳು. 'ನಾಳಿನ ಕೆಲಸವನ್ನು ಇಂದೇ ಮಾಡಬೇಕು ಅನ್ನುತ್ತಾರಲ್ಲ, ಹೀಗೆ ನೋಡು'.

ಸಿಂಧೂ ನೆಟ್ಟ ನೋಟದಿಂದ ಕ್ಯಾಲೆಂಡರ್ ನೋಡತೊಡಗಿದಳು. ಜೂನ್ ಎಂಟು! ನಾಳೆ ಶಾಲೆ ಸುರುವಾಗುವುದು. ಮತ್ತೆ ಅದೇ ಪಂಜರಲ್ಲಿ ಬಂದಿಯಾಗಬೇಕು. ಅದೇ ಊಟ ಮಾಡಬೇಕು. ಅದೇ ಪಾಠ ಹೇಳಬೇಕು. ಕ್ಯಾಲೆಂಡಿನಲ್ಲಿ ದಿನಗಳಿರದೆ ವರ್ಷಗಳಿದ್ದರೆ ತಾನು ಹಾಳೆಗಳನ್ನೂ ಹರಿದು 2042ನೇ ಇಸ್ವಿಗೆ ಹೋಗುತ್ತಿದ್ದೆ ಅನಿಸಿತ್ತು. 2047ನೆಯ ವರ್ಷದಲ್ಲಿ ಸಿಂಧೂ ಎಂಬ ಶಿಕ್ಷಕಿಯೊಬ್ಬಳಿದ್ದಳು ಅಂತ ಯಾರಿಗೂ ನೆನಪೇ

ಇರಲಾರದು.

ಸಿಂಧೂ ಕ್ಯಾಲೆಂಡರ್ ನೋಡುತ್ತಿರುವುದನ್ನು ಗಮನಿಸಿದ ಮಂಜೂ ಆಕೆಯ ಹೆಗಲ ಮೇಲೆ ಕೈಯಿರಿಸಿ ಹೇಳಿದಳು. 'ಸಿಂಧೂ ತಾಯೀ, ನೀನು ನಿಜವಾಗಿ ಬಹಳ ಭಾಗ್ಯಶಾಲಿ' ಇದೇನು ಮಂಜೂ ತನ್ನನ್ನು ಹಾಸ್ಯ ಮಾಡುತ್ತಿದ್ದಾಳೆಯೇ? ಛೇ ಇಲ್ಲ. ಅವಳ ಕಣ್ಣುಗಳು ಭಾವಪೂರ್ಣವಾಗಿವೆ.

ಕ್ಷಣ ತಡೆದು ಮಂಜೂ ಅಂದಳು. 'ಕಾಲೇಜಿನಲ್ಲಿದ್ದಾಗ ನಾನು ಯಾವಾಗಲೂ ಒಂದು ಕನಸು ಕಾಣುತ್ತಿದ್ದೆ. ಡಿಗ್ರಿ ಸಿಕ್ಕ ಕೂಡಲೇ ಶಿಕ್ಷಕಿಯಾಗಬೇಕು. ಥೇಟು ಗಂಡಸಿನ ಹಾಗೆ ಬಾಳಬೇಕು. ಮಕ್ಕಳಿಗೆ ಕಲಿಸುವ ಪವಿತ್ರಕೆಲಸ ಮಾಡಬೇಕು ಅಂತ ಆದರೆ ಆದರೆ...'

ಮಂಜೂ ಮಾತು ನಿಲ್ಲಿಸಿದಳು. ಆಕೆಯ ಅಗಲವಾದ ಕಣ್ಣುಗಳಲ್ಲಿ ತುಂಬಿದ ವೇದನೆ ಸಿಂಧೂಗೆ ಕಾಣಿಸಿತು. ಆಕೆಯ ಸಾಂತ್ವಾನಗೊಳಿಸಲು ಸಿಂಧೂ ಅಂದಳು. 'ನಲ್ವತ್ತು ಹುಡುಗರ ಶಿಕ್ಷಕಿಯಾಗುವುದಕ್ಕಿಂತ ಮೂರು ಮಕ್ಕಳ ತಾಯಿಯಾಗುವುದರಲ್ಲಿ ಹೆಚ್ಚಿನ ಸುಖವಿದೆ ಮಂಜೂ'.

ಮಂಜೂ ಉದ್ಗರಿಸಿದಳು. 'ಸುಖವೇ? ಸಂಸಾರ ಮತ್ತು ಬೆಟ್ಟ ಇವೆರಡೂ ದೂರದಿಂದಲೇ ಚೆಂದ ಕಾಣುತ್ತವೆ ಸಿಂಧೂ ತಾಯೀ, ಬೇರೆಯವರ ಕಣ್ಣಿಗೆ ನಾನು ಸುಖಿಯಾಗಿದ್ದಂತೆ ....

ಕಲ್ಪನೆ ಹಾಗೂ ಸತ್ಯ ಇವೆರಡರ ನಡುವೆ ಬಹಳ ಸಲ ಎರಡು ಧ್ರುವಗಳ ಅಂತರವಿರುತ್ತದೆಂದು ಸಿಂಧೂಗೆ ಖಾತ್ರಿಯಾಯಿತು.

ಮರು ದಿನ ಮುಂಜಾನೆ ಹತ್ತೂವರೆಗೆ ಅವರಿಬ್ಬರೂ ಊಟ ಮಾಡಿದರು. ಪುಸ್ತಕದ ಚೀಲ ತೆಗೆದುಕೊಂಡು ಸಿಂಧೂ ಶಾಲೆಗೆ ಹೊರಡಲು ತಯಾರಾದಳು. ಮಂಜೂ ಆಕೆಯ ಬಳಿ ಬಂದು ಕೇಳಿದಳು. 'ಒಂದು ತಮಾಷೆ ಮಾಡೋಣವೇ?'

'ಎಂಥದು?'

'ಸ್ವಲ್ಪ ಹೊತ್ತು ನಾನು ಶಿಕ್ಷಕಿಯಾಗುವೆ, ನಿನ್ನ ಶಾಲೆಯ ತನಕ' ಆಕೆ ಸಿಂಧೂನ ಚೀಲವನ್ನು ಎಳೆದುಕೊಂಡಳು.

ಚಿಕ್ಕ ಹುಡುಗಿಯೊಬ್ಬಳು ಹೊಸ ಫ್ರಾಕ್ ತೊಟ್ಟಾಗ ಡೌಲಿನಿಂದ ಮೆರೆಯುವ ಹಾಗೆ ಮಂಜೂ ರಸ್ತೆಯಲ್ಲಿ ಹೊರಟಳು. ನಡುವೆ ಯಾರೋ ಆಕೆಯನ್ನು ನೋಡಿ ಸಿಂಧೂಗೆ ಕೇಳಿದರು. 'ಹೊಸ ಟೀಚರ್ ಅಮ್ಮಾ ಅವರೇನು?' ಸಿಂಧೂ ಉತ್ತರ ಹೇಳುವ ಮೊದಲೇ ಮಂಜೂ 'ಹೌದು' ಅಂದಳು.

ಶಾಲೆಯ ಬಳಿ ಸಿಂಧೂನಿಂದ ಬೀಳ್ಕೊಳ್ಳುವಾಗವ ಮಂಜೂ ಅಂದಳು. 'ಅಯ್ಯೋ, ಮರೆತು ಬಿಟ್ಟೆನಲ್ಲ!'

'ಏನನ್ನು?'

'ನನಗೆ ನಿನ್ನೊಂದು ಫೋಟೋ ಬೇಕಿತ್ತು. ನೀನು ಪುಸ್ತಕ ತಗೊಂಡು ಶಾಲೆಗೆ ಹೊರಟ ಪೋಜಿನದು.'

ರಜೆ ಸುರುವಾದಾಗ ಸಿಟ್ಟಿನಿಂದ ಟೇಬಲಿನ ಡ್ರಾಯರಿನೊಳಗೆ ತುರುಕಿದ್ದ ತನ್ನ ಫೋಟೋದ ನೆನಪಾಯಿತು. ಸಿಂಧೂಗೆ ಫೋಟೋಗಳು ಮೋಸ ಮಾಡುತ್ತವೆ ಎಂದು ಹೇಳಬೇಕೆನಿಸಿತು. ಆದರೆ

ಮಂಜೂ ಉತ್ಕಂಠೆಯಿಂದ ಕೇಳಿದಳು. 'ನೀನು ಕಳಿಸಿಕೊಡುತ್ತೀಯಾ ಪ್ಲೀಜ್!'

ಸಿಂಧೂ ಆಗಲೆಂಬ ಗೋಣು ಹಾಕಿದಳು.

ಢಣ್ ಢಣ್ ಎಂದು ಶಾಲೆಯ ಗಂಟೆ ಬಾರಿಸತೊಡಗಿತು. ಸಿಂಧೂ ಅಂದುಕೊಂಡಳು. ಕೈದಿಗಳು ಜೇಲಿನ ಒಳಗೆ ತಿರುಗಿ ಹೋಗುವ ಸಮಯವಾದಾಗ ಹೀಗೇ ಗಂಟೆ ಬಾರಿಸುತ್ತಿದ್ದಿರಬೇಕು.

ಸಿಂಧೂವಿನಿಂದ ಬೀಳ್ಕೊಂಡು ನಿಧಾನವಾಗಿ ಮುದುವರಿದ ಮಂಜೂನ ಕಿವಿಯಲ್ಲಿ ಗಂಟೆಯ ನಾದ ಮೊಳಗುತ್ತಿತ್ತು. ಆಕೆ ಅನಿಸುತ್ತಿತ್ತು ಸಂಸಾರವೆಂದರೆ ಯಜ್ಞವಿದ್ದಂತೆ ಅನ್ನುತ್ತಾರೆ. ಹಿಂದಿನ ಕಾಲದಲ್ಲಿ ಯಜ್ಞ ಮಾಡುವಾಗ ಋಷಿಗಳು ಮೂಕ ಪ್ರಾಣಿಗಳ ಬಲಿ ಕೊಡುತ್ತಿದ್ದಾರಲ್ಲ, ಆಗ ಹೀಗೆಯೇ ಘಂಟನಾದ ಮಾಡುತ್ತಿದ್ದಿರಬೇಕು.

(ಇದನ್ನು ಶ್ರೀ ಖಾಂಡೇಕರರು 1942ರಲ್ಲಿ ಬರೆದರು. ಇದೊಂದು ವಿಶಿಷ್ಟ ಸಾಹಿತ್ಯ ಪ್ರಕಾರ, ಲಲಿತಾ ಪ್ರಬಂಧ ಹಾಗೂ ಸಣ್ಣ ಕಥೆ ಇವೆರಡರ ಗುಣ ಲಕ್ಷಣವನ್ನು ಹೊಂದಿದ ಇಂತಹ ಬರಹಕ್ಕೆ ಮರಾಠಿಯಲ್ಲಿ 'ಗುಜಗೋಷ್ಠಿ' ಎಂದು ಹೆಸರು)

ಕೃಪೆ: ಅನಿಕೇತನ

●

ವಿ.ಸ. ಖಾಂಡೇಕರ

(ಪುಟ 7ರಿಂದ)

ಸಾಕರು. ಅದರಿಂದಾಗಿ ಕವಿ ಕಾವ್ಯವನ್ನು ಕುರಿತು ಚರ್ಚಿಸುವಾಗ ಅವರ ಸಹೃದಯತೆ ಮುಂದೆ ಬಂದು ನಿಷ್ಪಕ್ಷಪಾತ ವಿಮರ್ಶೆಯೆಂಬುದು ಸಾಧ್ಯವಾಗದೇ ಹೋಗುತ್ತದೆ. ಅವರ ವಿಮರ್ಶೆಯನ್ನು ರಸ ವಿಮರ್ಶೆಯೆಂದು ಬೇಕಾದರೆ ಕರೆಯಬಹುದು. ಕೇಶವಸುತ ಮತ್ತು ಅಗರಕರಲ್ಲಿಯ ಗೌರವ ಭಾವದಿಂದ ಅವರ ಗುಣ ವಿಶೇಷದ ಕಡೆಗೆ ಅವರು ಹೆಚ್ಚು ಗಮನ ಕೊಟ್ಟಿದ್ದುದೂ ಕಂಡು ಬರುತ್ತದೆ. ಆದರೆ ವಾ.ಮ. ಜೋಶಿಯವರ ಕುರಿತು ಬರೆಯುವಾಗ ಅವರ ದೋಷಗಳನ್ನು ಗುರುತಿಸಲು ಮರೆಯುವುದಿಲ್ಲ.

1900 ರಿಂದ 1935 ಮರಾಠಿ ನಾಟಕ ರಂಗದಲ್ಲಿ ಒಂದು ಸುವರ್ಣಕಾಲ. ಆ ಕಾಲದಲ್ಲಿ ಗಡಕರಿ ಮತ್ತು ಕೊಲ್ಹಟಕರರು ತುಂಬ ಪ್ರಸಿದ್ಧಿಯನ್ನು ಪಡೆದವರಾಗಿದ್ದರು. ಇವರಿಬ್ಬರನ್ನು ಖಾಂಡೇಕರರು ಗುರುಸ್ಥಾನದಲ್ಲಿಟ್ಟುಕೊಂಡು ಅಭ್ಯಾಸ ಮಾಡುತ್ತಾರೆ. ಮರಾಠಿ ರಂಗ ಭೂಮಿಯ ಇತಿಹಾಸ, ಪರಂಪರೆ, ಸಮಕಾಲೀನ ಬೆಳವಣಿಗೆ ಇತ್ಯಾದಿಗಳನ್ನು ಅವರು ಶ್ರದ್ಧೆಯಿಂದ ಗಮನಿಸುತ್ತಾರೆ. ಅವರು ತಮ್ಮ ಮರಾಠಿಯ ನಾಟ್ಯ ಸಂಸಾರ (ಮರಾಠಿಚಾ ನಾಟ್ಯ ಸಂಸಾರ) ಗ್ರಂಥದಲ್ಲಿ ನಾಟ್ಯ ಕಲೆಯ ವಿವಿಧ ಮುಖಗಳನ್ನು ಕುರಿತು ಆಲೋಚಿಸಿದ್ದು ಮಹತ್ವದ ಸಂಗತಿಯಾಗಿದೆ.

ಖಾಂಡೇಕರರು ನಾಟ್ಯ ಸಮ್ಮೇಳನ, ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರಾಗಿ ಮಾಡಿದ ಭಾಷಣಗಳು ಆ ಸಾಹಿತ್ಯದ ಸಮೀಕ್ಷೆ ಮತ್ತು ಚಿಂತನೆಗಳೇ ಆಗಿವೆ.

ಖಾಂಡೇಕರರು ಲೇಖಕನಿಗೆ ಮೂರು ಬಗೆಯ ವ್ಯಕ್ತಿತ್ವಗಳಿರುತ್ತವೆಯೆಂದು ಹೇಳುತ್ತಾರೆ. 1. ಆಂತರಿಕ, 2. ಲೌಕಿಕ, 3. ವಾಙ್ಮಯೀನ. ಅವರು ಈ ಮೂರು ವ್ಯಕ್ತಿತ್ವಗಳ ಒಂದು ಮಾದರಿಯಾಗಿದ್ದರೆಂದು ಹೇಳಬಹುದು.

ಖಾಂಡೇಕರರ ಸಾಹಿತ್ಯ ಸಮಾಜ ನಿಷ್ಠೆಯ, ಮಾನವತಾ ವಾದದ ಪ್ರತೀಕವಾಗಿರುವಂತೆ, ಅಗಾಧವಾದ ಕಲ್ಪಕ ಶಕ್ತಿಯ, ಅಲಂಕಾರಿಕವಾದ ಭಾಷಾ ಶೈಲಿಯ ಅಸಾಧಾರಣ ಗುಣವನ್ನು ಹೊಂದಿದೆ. ಖಾಂಡೇಕರರನ್ನು ಓದಿದವರು ಅವರ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲವೆನ್ನುವಷ್ಟು ಅವರ ಬರವಣಿಗೆ ಶಕ್ತಿಶಾಲಿಯಾಗಿದೆ. ಅವರಿಗೆ ದೊರೆತ ಎಲ್ಲ ಪ್ರಶಸ್ತಿಗಳು ತಮ್ಮ ಮಹತ್ವವನ್ನು ಹೆಚ್ಚಿಸಿಕೊಂಡಿವೆಯೆಂದು ಹೇಳಬಹುದು. 'ಭಾವು ಸಾಹೇಬ' ಎಂದು ಆತ್ಮೀಯವಾಗಿ ಕರೆಯಿಸಿಕೊಳ್ಳುತ್ತಿದ್ದ ಅವರು, ಆ ಹೆಸರಿಗೆ ತಕ್ಕ ವ್ಯಕ್ತಿತ್ವವನ್ನು ಪಡೆದಿದ್ದರೆಂಬುದು ಮಹತ್ವದ ಮಾತಾಗಿದೆ.

ಕೃಪೆ : ಅನಿಕೇತನ

ಕವನಗಳು

ದಾಂಗುಡಿಯ ನೀನಾಗು

ದಾಂಗುಡಿಯ ನೀನಾಗು!!
ಅಡಿಯ ಮುಂಡಿಡಲು
ಕುಡಿಗಳನ್ನು ಚಾಚುತಿರು
ಆಸರೆ ಕೇಳು, ಪರ್ಯ್ಯರಗಳಿಗೆ
ಎಂಥ ವಿಷಮ ಸ್ಥಿತಿಯಲ್ಲೂ
ನೀ ಮುಂದೆ ಮುಂದೆ ಸಾಗು.
ವಿಧಿ ತಾ ಮರುತನೋಲ್ ಬಂದು
ಕುಡಿಗಳನು ಅಲುಗಾಡಿವೆ
ಹಿಡಿತ ತಪ್ಪಿಸಬಹುದು.
ಆಗ ನೆಲದ ಮೇಲಾದರೂ ಸೈ, ಮುನ್ನುಗ್ಗು
ಆದರೂ ಲಕ್ಷ್ಯ ಮಾತ್ರ ಬಾನೆಡೆಗಿರಲಿ.
ಮರವೊಂದು ದೊರೆತಾಗ ಆಸರೆ ಕೇಳು.
ಆಸರೆ ಸಿಕ್ಕಾಗಲೂ ದಾಂಗುಡಿಯಾಗಿಯೇ ಬೆಳೆ.
ಆದರೆ, ಬಂದಳಿಕೆ ಮಾತ್ರ ನೀನೆಂದಿಗೂ ಆಗದಿರು

— ಬಿ.ಬಿ. ಜೇವೂರೆ, ನೀಲಮ್‌ನಗರ್.

ವಸಂತಕಾದೊಲುಮೆ

ಒಲುಮೆ ಎಂದೆಂದಿಗೂ
ಹೊಳೆಯಂತೆ ಹರಿಯುತ್ತ,
ಕಾಲರಾಯನ ಬಾಯ್ಗೆ ಬೀಳದಿರಲು,
ಬೇರೊಂದು ಭಾಗ್ಯವನು
ಹಾರದೆಯೆ ಬಗೆಗಮರಿ
ಬಿಗಿಯವೇ ಈ ಹೊನ್ನ ಸಂಕಲೆಯನು!
ಹಾಗಿರದೆ ನಿಟ್ಟುಸಿರು
ಬೇಗೆ ಬಿಸಿಯೇರುವುದು,
ಹಾರುವುದು ಗರಿಹೊಯ್ದು ಮಿಂಚಿನೊಲುಮೆ;
ಅದಕಾಗಿ ಒಲಿಯುವವು
ಮದವೇರಿ ಒಕ್ಕಾಲ-
ಆ ಕಾಲವಾವುದು? ವಸಂತಕಾಲ!
ಒಲಿದವರು ಬೇರಾಗಿ,
ಫಲಿಸದಾಸೆಯ ತೊರೆದು,
ಎದೆ ಬಿರಿದು ಸಾವೆ ಗತಿ ಎನ್ನುತಿಹರು.
ಕೆಲ ಕಾಲ ನೂಕುವರು,
ನಲುಗದೆಯೆ ಕಾಣುವರು,
ಕಾಣು ತಲೆ ಕೆರಳುತ್ತ ನರಳಿದವರು!
ಚೆಂದದಲಿ ಇಬ್ಬರೂ
ಹೊಂದಿರುವುದೇ ಕಾಲ,
ಆ ಕಾಲ ಹಿರಿಕೊಳಲಿ ಒಲುಮೆಸಿರಿಯ;
ಚೆಳಗಾಲ ಕವಿಯುತಲೆ
ಉಳಿವುದೋ, ಅಳಿವುದೋ
ಅಳಿಯದೆಯೆ ಇರುವುದೆ ವಸಂತಕಾಲ?

Byron (1759-1795) Could love for ever

ಅನುವಾದ: ಬಿ.ಎಂ.ಶ್ರೀ
ಕೃಪೆ: ಇಂಗ್ಲೀಷ್ ಗೀತೆಗಳು

ಪ್ರಾರ್ಥನೆ

ಕರುಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ,
ಕೈ ಹಿಡಿದು ನಡೆಸೆನ್ನನು.
ಇರುಳು ಕತ್ತಲೆ ಗವಿ; ಮನೆ ದೂರ; ಕನಿಕರಿಸಿ,
ಕೈ ಹಿಡಿದು ನಡೆಸೆನ್ನನು.
ಹೇಳಿ ನನ್ನಡಿಯಿಡಿಸು; ಬಲುದೂರ ನೋಟವನು
ಕೇಳೆನೊಡನೆಯೆ- ಸಾಕು ನನಗೊಂದೆ ಹೆಜ್ಜೆ.
ಮುನ್ನ ಇಂತಿರದಾದೆ; ನಿನ್ನ ಬೇಡದೆ ಹೋದೆ,
ಕೈ ಹಿಡಿದು ನಡೆಸು ಎನುತ.
ನನ್ನ ದಾರಿಯ ನಾನೆ ನೋಡಿ ಹಿಡಿದೆನು;- ಇನ್ನು,
ಕೈ ಹಿಡಿದು ನಡೆಸು ನೀನು.
ಮಿರುಗುಬಣ್ಣಕೆ ಬೆರತು, ಭಯಮರೆತು, ಕೊಬ್ಬಿದೆನು;
ಮರೆದಾಯ್ತು; ನೆನೆಯದಿರು ಹಿಂದಿನದನೆಲ್ಲ.
ಇಷ್ಟು ದಿನ ಸಲಹಿರುವೆ ಮೂರ್ಖನನ್ನು; ಮುಂದೆಯೂ
ಕೈ ಹಿಡಿದು ನಡೆಸದಿಹೆಯಾ?
ಕಷ್ಟದಡವಿಯ ಕಳೆದು, ಬೆಟ್ಟ ಹೊಳೆಗಳ ಹಾದು,
ಇರುಳನ್ನು ನೂಕದಿಹೆಯಾ?
ಬೆಳಗಾಗ ಹೊಳೆಯದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳೆಕೊಂಡ ದಿವ್ಯ ಮುಖ ನಗುತ?

New Man (1801-1890) Lead kindly light)

ಅನುವಾದ: ಬಿ.ಎಂ.ಶ್ರೀ
ಕೃಪೆ: ಇಂಗ್ಲೀಷ್ ಗೀತೆಗಳು

ಯುಗಾದಿಯ ಹಾರ್ದಿಕ ಶುಭಾಶಯಗಳು

ಯುಗ ಯುಗಾಂತರವ ಕಳೆದು ಮತ್ತೊಮ್ಮೆ ಮರಳಿ ಬಂದಿದೆ ಯುಗದ ಆದಿ ಯುಗಾದಿ.

ವಿಷು ಸಂವತ್ಸರಕೆ ಹೆಜ್ಜೆ ಇಟ್ಟಿರುವ ವರ್ಷದ
ಮೊದಲ ತೇದಿಗೆ ಸಿಂಗರಿಸಿ ಕಟ್ಟಿರುವ ಮಾವು ಬೇವಿನ ತಳಿರು ತೋರಣವು ಹೊಸ ವರುಷದ ಹೊಸ ಹರುಷಕೆ ನಾಂದಿಯಾಗಲಿ.
ಮನೆ ಮನೆಗಳಲಿ ನಗೆಯರಳಿ ಸಕಲ ಸೌಭಾಗ್ಯ ಸಂಪದವು ಬರಲಿ.
ಸಮರಸದ ಜೀವನದ ಅನುಭವಕೆ ಬೇವು ಬೆಲ್ಲದ ಕಹಿ ಸಿಹಿಯ ಸ್ವಾದ ಬಲ್ಲವನೆ ಬಲ್ಲನೆಂಬ ಬೆಲ್ಲದ ಸವಿಯು ಎಲ್ಲರಿಗೂ ಅಧಿಕವಾಗಿರಲಿ.
ನೋವು ನಲಿವಿನ ನಡುವೆ ನಿಕಟ ನೆಂಟಸ್ತಿಕೆ ಇಹುದೆಂದು ಹೇಳುವುದು ಯುಗಾದಿ
ಆದರೆ ನೋವಿನ ಅನುಭವ ಮತ್ತದರ ನೆರಳು ಸಹ ಯಾರಿಗೂ ಸೋಂಕದಿರಲಿ ಒಲವು ನಲಿವಿನಿಂದ ಬದುಕು ಬಂಗಾರವಾಗಿ ಅನವರತ ಸಂತಸದ ಸೋಪಾನವಾಗಲಿ.
ಇಂದಾದರೂ ಬರಲಿ ಮುಂದಾದರೂ ಬರಲಿ ಎಂದೆಂದಿಗೂ ಮರಳಿ ಮತ್ತೆ ಮತ್ತೆ ಯುಗಾದಿ ಬರುತಿರಲೆಂದು ದೇವನನು ಬೇಡಿರಿಂದು.
ನಿನ್ನೆ, ನಿನ್ನೆಗೆ ಬಿಟ್ಟು ನಾಳೆ ನಾಳೆಗೆ ಇಟ್ಟು ಇಂದಿನದೊಂದನ್ನು ಚಿಂತಿಸಿದಲ್ಲಿ ಜಗದ ಜೀವನ, ನಗೆಯ ನಂದನವಾಗಿ ಮನದಲ್ಲಿ ಸುಖ ಶಾಂತಿ ನೆಲೆಸುವುದು ಸ್ಥಿರವಾಗಿ
ಯುಗಾದಿಯ ಹೊಸ ವರ್ಷಕೆ ಹರ್ಷದ ನನ್ನ ಹಾರ್ದಿಕ ಹಾರೈಕೆ ನಿಮಗೆಲ್ಲರಿಗೆ ಅನುಗಾಲವಿರಲಿ ಭಗವಂತನ ಕೃಪಾಕಟಾಕ್ಷವಿರಲಿ.

— ಸೀತಮ್ಮ ಆ.ರ.

ಆತ್ಮೀಯರೇ,

ವಂದನೆಗಳು.

ತಾವು ಕಳುಹಿಸಿದ 'ನೇಸರು ತಿಂಗಳೋಲೆ' ತಲುಪಿದೆ. ಅಂದವಾದ ಮುದ್ರಣದೊಂದಿಗೇ ಆಕರ್ಷಕವಾಗಿ ಪ್ರಕಟನೆಗೊಳ್ಳುತ್ತಿರುವ ತಿಂಗಳೋಲೆ ಓದಿ ಖುಷಿಯಾಯಿತು. ಈ ತಿಂಗಳ ಸಂಚಿಕೆಯಲ್ಲಿ ನಾನು ಬರೆದ/ತಯಾರಿಸಿದ ಲೇಖನವನ್ನು ಪ್ರಕಟಿಸಿರುವುದಕ್ಕಾಗಿ ಕೃತಜ್ಞತೆಗಳು. 'ಮೈಸೂರು ಅಸೋಸಿಯೇಶನ್' ಎಂಬ ಕನ್ನಡಿಗರ ಸಂಸ್ಥೆ ಅಷ್ಟೊಂದು ದೀರ್ಘ ಅವಧಿಯಿಂದ ಬೆಳೆದು ಉಳಿದು ಕನ್ನಡಿಗರನ್ನು ಒಂದಾಗಿ ಇಟ್ಟುಕೊಳ್ಳುತ್ತಿರುವುದು. ಅವರ ಸಾಹಿತ್ಯ ಹಾಗೂ ಸಾಂಸ್ಕೃತಿಕ ಆಶೋತ್ತರಗಳನ್ನು ಪೂರೈಸುತ್ತಿರುವುದು ಶ್ಲಾಘನೀಯ. ಇಂತಹ ಉತ್ತಮ ಕಾರ್ಯಗಳು ಆಗಬೇಕಾದರೆ ಹಿರಿಯರ ಒಳ್ಳೆ ಮಾರ್ಗದರ್ಶನ, ಉತ್ಸಾಹಿ ಕಾರ್ಯಕರ್ತರ ಸಹಾಯ ಅತ್ಯವಶ್ಯ. ಅದನ್ನೆಲ್ಲ ಒದಗಿಸುತ್ತಿರುವ ತಮ್ಮೆಲ್ಲರಿಗೂ ಅಭಿನಂದನೆಗಳು.

ನೇಸರನ ಆಸರೆಯಲ್ಲಿ ನಿಮ್ಮೆಲ್ಲರ ಹಾಗೂ ಎಲ್ಲ ಚಟುವಟಿಕೆಗಳ ಸರ್ವತೋಮುಖ ಅಭಿವೃದ್ಧಿಯಾಗಲಿ ಎಂದು ಹಾರೈಸುತ್ತೇನೆ. ನನ್ನಿಂದಾಗಬಹುದಾದ ಯಾವುದೇ ಸಹಕಾರ/ಸಹಾಯಗಳಿಗೆ ಸಂಕೋಚಿಸದೇ ಸಂಪರ್ಕಿಸಿ.

ಶುಭವಾಗಲಿ.

— ಪ್ರಕಾಶ್ ಜಿ. ಭಟ್ಟ

(....from page 3)

OH, MYSORE !

famous for its sandal, jasmine, betel leaves, agarbatti, attar etc. Veena Subbanna epitomised this epicurean Mysore. He was considered an expert in identifying the best in flowers, betel leaves, scents etc. He always had a stock of the best attar from Kanauj.

There is he story of a famous dancer from Tanjavur who performed in Subbanna's residence. After the performance, it is said she declined the fairly fat fee offered. Instead she requested a bottle of attar he had.

This inevitably brings to food, especially the eating houses. During those days the Annapoorneswari lodge in the hundred feet road was a famous hotel serving very tasty south Indian food. And then the 'health kitchen' of the Maharaja's college was another popular eating spot. Whole generations of students of this college have fed themselves there. Managed by the Iyer bothers, from Kerala, Rama, Krishna and Devaraja, it was known for its clean food and also innovations.

When Prof. Arkroyd lectured on the wonderful nutrient properties of ragi, the health kitchen came out with a series of dishes made from ragi, dosa, idly, biscuit etc.

But the pride of place should go to the 'boardless Naranachar'. His eating place in the old agrahar had no board. Yet it was a popular place always packed with customers. The customers consisted of a cross section of paunchy sowcars, richmen of Santhepet, doctors, civil servants and students.

It was a submissive clientele. The customer never demanded but went in more as a pilgrim to receive 'prasadam' Naranachar was an autocrat of the kitchen and no one liked to rub him on the wrong side.

I remember the morning, for instance, when a couple of sowcars who came for their breakfast were busy discussing some commercial matters. One of them suddenly asked the serving boys how long would it take to get his food. This was heard by Naranachar who was busy in the kitchen. He came out with the turn-spit in his hand and asked, "Who is it..... who is it.. in such a hurry. Tell him that no food is available". The chastened sowcar meekly pleaded with Naranachar and later received his food.. What was it? 'set dosa' for which Mysore city was famous.

In fact, the credit for introducing this dish should go to Naranachar. 'Set dosa' consisted of four small plain rice cakes topped by potato curry, chutney and butter. It was such a tasty dish that it literally melted in the mouth.

Naranachar was very particular about the quality. He got the materials used for making it from particular shops and places. The butter he used not only for the 'set dosa' but for the other sweet preparations like ;kesari bath', 'Mysore pak' etc. was got from Sosale and Bevukallu village.

Another such eating place of the thirties was the 'Vidyarthi bhavan' near the Jaganmohan palace. It was noted for is 'sada dose' and tuppa or ghee, granular and sweet smelling and tasty especially when mixed with the coconut chutney which was supplied liberally.

Though not as popular as the above, Mysore city had numerous such eating places in those days. And the present one are not match before them.

Indeed, each part of the life of Mysore city of those days could be the subject of an exclusive essay. Apart from the annual Dasara and birthday celebrations there were events like the Ganeshotsav, Krishnashtami, car festival and theppotsavam on the Chamundi hills, that enlivened the sedate cultural life of the city.

*Courtesy : '**Murali Vani**' Shir B.V.K. Shastry Felicitation Volume including his Comprehensive writings*

Exhibition & Inauguration of Website On Karnataka Kashida On Wednesday 4th April 2001

Venue:

1st Floor, University Canteen Terrace, University of Mumbai, Santacruz (East), Mumbai – 400 098

Time: 11 A.M. to 6 P.M.

Note: The Karnataka Kashida of ancient Indian originated from Hubli Dharwar region. Traditionally it was worked by counting threads and without knots. Hence, it was identical on both sides. This type of embellishment of sarees, blouses and bonnet cum cape of babies has four varieties of stitches namely Ganthi, Murgi, Menthe and Negi. The different flora and fauna and various artifacts are worked in geometric pattern wherein the stitches run in any one of the three directions i.e. horizontal, vertical & diagonal.

You are most cordially invited to attend the Exhibition.

Prof. T. Vasanthakumar
Head,
Department of Kannada

ಸುತ್ತಮುತ್ತ

ಚಿಂತನಾ ದೀಪ್ತಿ, ವ್ಯಾಖ್ಯಾನ ಮಾಲೆಯ ಉದ್ಘಾಟನೆ

ದಿನಾಂಕ 18-3-2001ನೇ ರವಿವಾರ ಮುಂಬಯಿ ಬಸವೇಶ್ವರ ತಾತ್ವಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಬೆಂಗಳೂರಿನ ಬಸವ ಸಮಿತಿಯ ಪ್ರಕಟಣಾ ವಿಭಾಗದ ನಿರ್ದೇಶಕರಾದ ಪ್ರೊ| ಬಿ. ವಿರುಪಾಕ್ಷಪ್ಪ, ಡಾ| ಎಸ್. ವಿದ್ಯಾಶಂಕರ ಅವರು ಚಿಂತನ ದೀಪ್ತಿ ಕಾರ್ಯಕ್ರಮದಲ್ಲಿ ಬಸವಣ್ಣ ಮತ್ತು ಇಂದಿನ ಸಮಸ್ಯೆಗಳು ಕುರಿತು ಹಾಗೂ ವಚನಕಾರ್ತಿಯರು ಈ ಎರಡು ಮಹತ್ವದ ವಿಷಯಗಳ ಬಗ್ಗೆ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷರಾದ ಎ.ವಿ. ಬಳಿಗಾರ ಅವರು ಸ್ವಾಗತ ಭಾಷಣ ಮಾಡಿದರು. ಸಂಸ್ಥೆಯ ಟ್ರಸ್ಟಿಗಳಾದ ಭೂಮ ರೆಡ್ಡಿ, ಕೋಳಿವಾಡ, ಅಂಗಡಿ ಅವರು ಅತಿಥಿಗೆ ಶಾಲು ಶ್ರೀಫಲದೊಂದಿಗೆ ಸತ್ಕರಿಸಿದರು. ಶ್ರೀ ಗಿರೀಶ ಸಾರವಾಡ ಅವರಿಂದ ವಚನ ಗಾಯನವಾಯಿತು.

ಎ.ವಿ. ಸನದಿಯವರು ಅತಿಥಿಗಳ ಕಿರು ಪರಿಚಯ ಮಾಡಿ ಬಸವಣ್ಣನ ವಚನ ಎಲ್ಲ ದೃಷ್ಟಿಯಿಂದಲೂ ಪ್ರಚಾರ ಆಗಬೇಕು ಯಾವ ರೀತಿ ನಾವು ಆಯಾತ ನಿರ್ಯಾತ ಮಾಡಿ ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳುತ್ತೇವೆ ಅದೇ ರೀತಿ ಜ್ಞಾನದ ವಿಕಾಸಕ್ಕೆ ನಮ್ಮ ವಿಚಾರಗಳನ್ನು ಮಹಾ ಮಾನವ ಬಸಣ್ಣನ ವಚನಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟನೆ ನಿರ್ಯಾತ ಮಾಡಬೇಕೆಂದು ಹೇಳಿದರು.

ಪ್ರೊ. ವಿರುಪಾಕ್ಷಪ್ಪನವರು ತಮ್ಮ ಭಾಷಣದಲ್ಲಿ ಜಾತ್ಯತೀತ ರಾಷ್ಟ್ರವೆಂದು ಘೋಷಿಸಿದೆ ಸರ್ವಧರ್ಮ ಸಮಾನತೆಯ ದೇಶ ಎಂದರೆ ಉಚಿತವಾಗುತ್ತದೆ ಬಸವಣ್ಣನವರು ತಮ್ಮ ವಚನದಲ್ಲಿ ಈಗ ನಡೆದಂತಾ ಮಂದಿರ, ಮಸೀದಿ, ಚರ್ಚ ಗುರುದ್ವಾರಗಳ ಮೇಲಿನ ಹಲ್ಲೆ ಉಂಟಾಗುತ್ತದೆ ಎಂದು ಅವರು 800 ವರ್ಷ ಮುಂಚಿತವಾಗಿಯೇ ತಿಳಿದು ಎನ್ನ ಕಾಲವೇ ಕಂಬ. ದೇಹವೇ ದೇಗುಲ ಎನ್ನ ಶಿರವೇ ಹೊನ್ನಿನ ಕಳಶವಯ್ಯ ಎಂದು (ಮಣ್ಣು ಬಿಟ್ಟು ಮಡಿಕೆ ಇಲ್ಲಾ, ತನ್ನ ಬಿಟ್ಟು ದೇವನಿಲ್ಲ) ಹೇಳಿ ಮಂದಿರಗಳನ್ನು ಕಟ್ಟಿಸುವುದರಲ್ಲಿ ನಿಮ್ಮ ಹಣವನ್ನು ವಿನಾ ಮಾಡದೆ ಬಡಬಗ್ಗರಿಗೆ ಅನ್ನದಾಸೋಹ ಜ್ಞಾನ ದಾಸೋಹದಂತ ಪುಣ್ಯ ಕೆಲಸ ಮಾಡಿರಿ ಎಂದು ಕಳಕಳಿಯಿಂದ ಹೇಳಿದ್ದಾರೆ. ಇಂಥ ಅನೇಕ ಉದಾಹರಣೆಗಳಿಗೆ ವಚನ ಸಾಹಿತ್ಯದ ಬಗ್ಗೆ ಚರ್ಚಿಸಲು ಸಮಯ ಸಾಲದೆಂದು ನುಡಿದರು.

ಡಾ. ಎಸ್. ವಿದ್ಯಾಶಂಕರ್ ಅವರು ತಮ್ಮ ಭಾಷಣದಲ್ಲಿ ಮುಖ್ಯಾಯಕ್ಕ ಅಕ್ಕ ಮಹಾದೇವಿ, ಕಾಳವ್ವೆ ನಿಲೋಚನಿಯರ ವಚನಗಳನ್ನು ಅವರು ಆಗಿನ ಕ್ರಾಂತಿಯುಗದಲ್ಲಿ ಮಹಿಳೆಯರಿಗೆ ಸಮಾನತೆಯ ಕೊರತೆ ಇದ್ದಾಗ್ಯೂ ಬಸವಣ್ಣನ ಅಭಿನವ ಮಂಟಪದಲ್ಲಿ ಮತ್ತು ಹೃದಯದಿಂದ ತಮ್ಮ ವಚನಗಳನ್ನು ರಚನೆ ಚರ್ಚಿಸುತ್ತಿದ್ದಾರೆಂದು ಹೇಳಿದರು.

ಡಾ. ಸಂಜೀವ ಶೆಟ್ಟಿಯವರು ಸಭೆಯ ಅಧ್ಯಕ್ಷತೆಯಲ್ಲಿ ವೈಚಾರಿಕ ದೃಷ್ಟಿಕೋನ ಮತ್ತು ಕನ್ನಡಕ್ಕೆ ನಾವು ಇಂದು ಕೊಡಬೇಕಾದ ಬೆಲೆ ಯಾವುದು ಎಂದು ಹೇಳಿದರು ಕನ್ನಡಕ್ಕೆ ಒಂದು ವೇಳೆ ನಮ್ಮ ಮಕ್ಕಳಿಗೆ ತಿಳಿಯದಿದ್ದರೆ ನಮ್ಮ ಅಮೂಲ್ಯ ವಚನ ಸಾಹಿತ್ಯ ಅವರಿಗೆ ಅರ್ಥವಾಗಲು ಸಾಧ್ಯವಿಲ್ಲ. ನಿದಾನ ಓದು ಬರಹಕ್ಕಾದರೂ ಕನ್ನಡವನ್ನು ಮಕ್ಕಳಿಗೆ ಕಲಿಸಿ ನಮ್ಮ ಸಂಸ್ಕೃತಿಯನ್ನು ಕಾಪಾಡಿರಿ. ಇಂಗ್ಲೀಷ್ ಕಲಿಯುವುದು ತಪ್ಪಲ್ಲ. ಆದರೆ ಅದರ ಸಂಗಡ ನಮ್ಮ ತಾಯಿ ನುಡಿಯನ್ನು ಮರೆಯದಂತೆ ನೋಡಿಕೊಳ್ಳಲು ವಿನಂತಿಸಿ ಕೊಂಡರು.

ಕಾರ್ಯಕ್ರಮದ ನಿರೂಪಣೆಯನ್ನು ನಮ್ಮ ಸಂಸ್ಥೆ ಮಹಿಳಾ ವಿಭಾಗದ ಶ್ರೀಮತಿ ಪ್ರೇಮಾ ಅಲ್ಲೂರ ಮಾಡಿದರೆ, ಶ್ರೀಮತಿ ಪಾರ್ವತಿ ಅಂಗಡಿಯವರು ವಂದನೆಗಳನ್ನು ಅರ್ಪಿಸಿದರು. ಮಹಾ ಪ್ರಸಾದದೊಂದಿಗೆ ಕಾರ್ಯಕ್ರಮ ಮುಕ್ತಾಯ ವಾಯಿತು.

ಯಕ್ಷಗಾನದಲ್ಲಿ ತಿಟ್ಟು ಮುಖ್ಯವಲ್ಲ ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ

ಮುಂಬಯಿ: ಯಕ್ಷಗಾನದಲ್ಲಿ ತಿಟ್ಟು ಭೇದ ಮುಖ್ಯವಲ್ಲ. ಪ್ರಸಂಗ ಒಂದೇ ಆಗಿದ್ದು ಅಲ್ಲಿ ಪ್ರದರ್ಶನ ಮುಖ್ಯವಾಗುತ್ತದೆ. ಇಲ್ಲಿ ರಾಗ ವಿಸ್ತಾರ ಹಾಕಲಾಗುತ್ತದೆ. ಹಿಮ್ಮೇಲ ಮುಮ್ಮೇಳಗಳ ಸಮನ್ವಯದ ಅಗತ್ಯವಿದೆ ಎಂದು ಮದ್ರಾಸ್ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ ಅವರು ನುಡಿದರು. ಅವರು ಇತ್ತೀಚೆಗೆ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವು ಆಯೋಜಿಸಿದ್ದ ಯಕ್ಷಗಾನದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವೊಂದರಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಯಕ್ಷಗಾನದ ಸಂಪೂರ್ಣ ಪರಿಜ್ಞಾನವುಳ್ಳ ಅರ್ತಿಕಜೆ ಅವರು ಗಮಕ ಮತ್ತು ಭಾಗವತಿಕೆಯ ವ್ಯತ್ಯಾಸ ಹಾಗೂ ಹೋಲಿಕೆಯನ್ನು ಕೆಲವು ಉದಾಹರಣೆಗಳ ಮೂಲಕ ಪ್ರಾಯೋಗಿಕವಾಗಿ ತೋರಿಸಿಕೊಟ್ಟರು.

ಯಾವುದೇ ಒಂದು ಕಲೆಯು ಮೂಲದಲ್ಲಿ ಜನಪದವಾಗಿದ್ದು ಮುಂದೆ ಅದು ಶಾಸ್ತ್ರೀಯವಾಗಿಯೋ, ಶಿಷ್ಟವಾಗಿಯೋ ಬೆಳೆಯುತ್ತದೆ. ಕೂಚಿಪುಡಿ, ಭಾಗವತ ಮೇಳಗಳು ಸಂಪೂರ್ಣ ಶಾಸ್ತ್ರೀಯ ಕಲೆಯಾಗಿ ಬೆಳೆದಿವೆ. ತಮಿಳಿನ ತೆರುಕೂತ್ತು ಜನಪದ ಕಲೆಯಾಗಿಯೇ ಉಳಿದಿದೆ. ಇದು ಒಂದು ದೃಷ್ಟಿಯಿಂದ ತೆರುಕೂತ್ತಿನ ದುರಂತ ಎನ್ನಬಹುದು. ಯಕ್ಷಗಾನವು ಜನಪದ ಕಲೆಯಾಗಿದ್ದು ಶಿಷ್ಟ ಕಲೆಯಾಗಿ ಬೆಳೆದಿದೆ ಎಂದು ಅವರು ನುಡಿದರು.

ಯಕ್ಷಗಾನಕ್ಕೆ ಮದ್ದಳೆಯೇ ಆಗಬೇಕು. ಮೃದಂಗ ಆಗಬಾರದು. ಚೆಂಡೆ, ತಾಳ (ತಾಳಮಯ)ಗಳಿಗೆ ಮದ್ದಳೆಯ ಶ್ರುತಿ ಹೊಂದುತ್ತದೆ. ಸಂಗೀತಕ್ಕಿಂತ ವ್ಯತಿರಿಕ್ತವಾಗಿ ಬಹಳ ಶಿಷ್ಟವಾದ ಪ್ರೌಢವಾದ ಮಾತು ಯಕ್ಷಗಾನದಲ್ಲಿ ಇರುವುದಿಲ್ಲ; ಅದರ ಅಗತ್ಯವೂ ಇಲ್ಲ. ಜನಸಾಮಾನ್ಯರಿಗೆ ಅರ್ಥವಾಗುವಂತೆ ಮಾತುಗಾರಿಕೆ ಇರುತ್ತದೆ. ಇರಬೇಕಾಗುತ್ತದೆ. ಆಗ ಅಚ್ಚುವೈಭವ ಮೂಡಿ ಬರುತ್ತದೆ.

ವೇಷ ಭೂಷಣ, ಬಣ್ಣಗಾರಿಕೆ, ಆಂಗಿಕಾಭಿನಯ, ನೃತ್ಯ, ಕುಣಿತ, ವಾಕ್ ವೈಭವ, ಹಾಡುಗಾರಿಕೆ ಹೀಗೆ ಪ್ರತಿಯೊಂದು ವಿಚಾರದಲ್ಲಿಯೂ ಯಕ್ಷಗಾನವು ಉತ್ತಮಿಕೆಯನ್ನು ಪಡೆದಿದೆ. ಆದುದರಿಂದ ಇದು ಸಮಷ್ಟಿ ಕಲೆ, ಸಂಪೂರ್ಣ ಕಲೆ, ಸಮತೋಲನದ ಕಲೆ, ಸಮಗ್ರ ಕಲೆ, ಪರಿಪೂರ್ಣ ಕಲೆ ಎಂದು ಈ ಸಂದರ್ಭದಲ್ಲಿ ಅರ್ತಿಕಜೆ ಅವರು ಒತ್ತಿ ನುಡಿದರು.

ಕೊನೆಯಲ್ಲಿ ನಾಗಚಂದನ ಅಭಿನವ ಪಂಪ ರಾಮಾಯಣ, ಕುಮಾರ ವ್ಯಾಸ ಭಾರತ, ಪಂಚವಟಿಯ ವಾಲಿಸುಗ್ರೀವ ಕಾಳಗ, ಕೃಷ್ಣ ಸಂಧಾನ, ಕರ್ಣಾವಸಾನ ಮೊದಲಾದ ಕೃತಿಗಳ ಆಯ್ದ ಭಾಗಗಳನ್ನು ಗಮಕ ಮತ್ತು ಭಾಗವತಿಕೆ ಶೈಲಿಯಲ್ಲಿ ಪ್ರಸ್ತುತಪಡಿಸಿದರು.

ವಿಭಾಗದ ಮುಖ್ಯಸ್ಥ ಡಾ. ತಾಳ್ತಜೆ ವಸಂತಕುಮಾರ ಅವರು ಸ್ವಾಗತಿಸಿದರು. ಡಾ. ಜಿ.ಎನ್. ಉಪಾಧ್ಯ ಅವರು ವಂದಿಸಿದರು.

ಮುಂಬಯಿ ವಿವಿಯಲ್ಲಿ ಬಸವವಾಹಿನಿ

'ವಿಜ್ಞಾನ-ವೈಚಾರಿಕತೆ-ಅನುಭಾವ'ಗುರಿ ಒಂದೇ

ಮುಂಬಯಿ: ಅನುಭಾವ, ವೈಚಾರಿಕತೆ ಮತ್ತು ವೈಜ್ಞಾನಿಕತೆ ಪರಸ್ಪರ ವಿರೋಧವಲ್ಲವೆಂದೂ ಈ ಮೂರರ ಅಂತಿಮ ಗುರಿ ಒಂದೇ-ಸತ್ಯ ದರ್ಶನ ಎಂದೂ ಇಲ್ಲಿ ಅಭಿಪ್ರಾಯಪಡಲಾಯಿತು.

Regn. No. 040015/86
Regn. No. TECH/47-202/MBI-2001
Date of Posting : 10-4-2001

ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗ ಮತ್ತು ಬೆಂಗಳೂರಿನ ಬಸವ ಸಮಿತಿ ಇವುಗಳ ಸಹಯೋಗದಲ್ಲಿ ನಡೆದ 'ಬಸವ ವಾಹಿನಿ'ಯಲ್ಲಿ ಈ ವಿಚಾರಗಳು ಬಂದವು.

'ವಚನ ಸಾಹಿತ್ಯ' ಅನುಭಾವ ಮತ್ತು 'ವಿಜ್ಞಾನ' ಎಂಬ ವಿಷಯದ ಮೇಲೆ ಉಪನ್ಯಾಸವಿತ್ತ ಪ್ರೊ। ವಿರೂಪಾಕ್ಷಪ್ಪ ಅವರು, 'ವೈಚಾರಿಕತೆ ಮತ್ತು ವೈಜ್ಞಾನಿಕತೆಯ ಅವಿನಾಭಾವ ಸಂಬಂಧ, ಅನುಭಾವ ಎಂದರೆ ಅಂತಿಮವಾದ ಸತ್ಯದರ್ಶನ. ವಿಜ್ಞಾನದ ಗುರಿಯೂ ಸತ್ಯಾನ್ವೇಷಣೆಯೆ' ಎಂದರಲ್ಲದೆ 'ಇವತ್ತು ವಿಜ್ಞಾನ ಏನು ಹೇಳುತ್ತದೋ, ಅದನ್ನೆಲ್ಲ ಶರಣರು ಬಹಳ ಹಿಂದೆಯೇ ತಮ್ಮ ವಚನಗಳಲ್ಲಿ ಹೇಳಿದ್ದರೆನ್ನುವುದು ಆಶ್ಚರ್ಯದ ಸಂಗತಿ. ಆದರೆ ಅವರು ಅದನ್ನು ವೈಂದ್ಯ ಭಾಷೆಯಲ್ಲಿ ವರ್ಣನೆ ಮಾಡಿದ್ದಾರೆಯೇ ವಿನಾ ಶಬ್ದದಲ್ಲಿ ಸ್ಪಷ್ಟವಾಗಿ ಮಾಡಿಲ್ಲ ಎಂದರು.

'ಶರಣರು ಅಂತಃಚಕ್ಷುವಿನಿಂದ ಕಂಡು ಹಿಡಿದ ಸತ್ಯವನ್ನು ವಿಜ್ಞಾನ ಇಂದು ಒಪ್ಪಿಕೊಂಡಿದೆ' ಎಂದವರು ಅಭಿಪ್ರಾಯಪಟ್ಟರಲ್ಲದೆ 'ಅನುಭಾವ ವಿಜ್ಞಾನ ಆಗಬೇಕು, ವಿಜ್ಞಾನ ಅನುಭಾವವಾಗಬೇಕು, ಆಗ ಮಾನವ ಪರಿಪೂರ್ಣತೆಯನ್ನು ಕಾಣಲು ಸಾಧ್ಯ' ಎಂದರು.

'ಶರಣರು ಮತ್ತು ಅನನ್ಯತೆಯ ಹುಡುಕಾಟ' ಎಂಬ ವಿಷಯದ ಮೇಲೆ ಮಾತನಾಡಿದ ಪ್ರೊ। ವಿದ್ಯಾಶಂಕರ್, 'ಶರಣರು ತಮ್ಮ ಅನನ್ಯತೆಯನ್ನು ಕಂಡುಕೊಳ್ಳಲಿಕ್ಕಾಗಿ ವೈಚಾರಿಕ ನೆಲೆಯಲ್ಲಿ ಸಾಮಾಜಿಕ ಮತ್ತು ಸಾಹಿತ್ಯಿಕ ಕ್ಷೇತ್ರದಲ್ಲಿ ಪ್ರಯತ್ನ ಪಟ್ಟರು. ಹನ್ನೆರಡನೇ ಶತಮಾನದ ಶರಣರು ಸಾಮಾಜಿಕ, ಧಾರ್ಮಿಕ ಚಳವಳವನ್ನು ನಡೆಸುವುದರ ಮೂಲಕ ಸಮಾಜವನ್ನು ಸ್ಥಗಿತ ಸ್ಥಿತಿಯಿಂದ ಚಲನಶೀಲತೆಯತ್ತ ನಡೆಸಿದರು. ಪರಂಪರೆಯನ್ನು ಒಡೆದು ಅದಕ್ಕೆ ಪರ್ಯಾಯವಾಗಿ ಭಕ್ತವರ್ಗವೊಂದನ್ನು ಅವರು ಸೃಷ್ಟಿಸಬೇಕಾಯಿತು. ಈ ಸಾಮಾಜಿಕ ಹಾಗೂ ಧಾರ್ಮಿಕ ಆಂದೋಲನಕ್ಕೆ ಪೂರಕವಾಗಿ ಏನಾದರೊಂದನ್ನು ಪರ್ಯಾಯವಾಗಿ ಸೃಷ್ಟಿಸುವುದು ಅನಿವಾರ್ಯವಾಗಿತ್ತು' ಎಂದು ತಿಳಿಸಿದರು.

'ಅರಿವಿನ ಮೂಲಕ ಸಮಾನತೆಯನ್ನು ತರುವ ಪ್ರಯತ್ನವನ್ನು ಶರಣರು ನಡೆಸಿದರು. ಅವರ ಹುಡುಕಾಟ ನಿರಂತರವಾಗಿತ್ತು, ಸತ್ಯಾನ್ವೇಷಣೆಯನ್ನು ಜನಸಾಮಾನ್ಯರಿಗೆ ತಲುಪಿಸುವ ಪ್ರಯತ್ನದಲ್ಲಿ ಜನಭಾಷೆಯನ್ನು ದೇವ ಭಾಷೆಯನ್ನಾಗಿ ಮಾಡಿದ್ದು ವಿಶೇಷ' ಎಂದವರು ಅಭಿಪ್ರಾಯಪಟ್ಟರು.

ಅಧ್ಯಕ್ಷ ಪೀಠದಲ್ಲಿದ್ದ ಅತಿಥೇಯ ವಿವಿ ಕನ್ನಡ ವಿಭಾಗ ಮುಖ್ಯಸ್ಥ ಡಾ। ತಾಳ್ತಜೆ ವಸಂತಕುಮಾರ್ ಮಾತನಾಡಿ, 'ಯಾವೊಂದು ಸಿದ್ಧಾಂತ ಬಂದಾಗಲೂ ಅದನ್ನು ಪ್ರಶ್ನಿಸುವ ಕೆಲಸವನ್ನು ಭಾರತೀಯ ವಿದ್ವಾಂಸರು ಮಾಡುತ್ತಾ ಬಂದಿದ್ದಾರೆ. ಶಿವಶರಣರು ಅದನ್ನೇ ಮಾಡಿದರು' ಎಂದರಲ್ಲದೆ 'ಅಲ್ಲಮ ಪ್ರಭುವಿನ ಧ್ಯಾನ ಮತ್ತು ಬಸವಣ್ಣನವರ ಸಂಘಟನೆ ಇವೆರಡೂ ಸಾಮಾಜಿಕ, ಧಾರ್ಮಿಕ ಆಂದೋಲನದ ಮುಖ್ಯ ಘಟಕಗಳಾಗಿ ಮುಂದುವರಿಯುತ್ತ ಬಂದಿವೆ' ಎಂದು ತಿಳಿಸಿದರು.

ವಿದ್ಯಾನಗರಿಯಲ್ಲಿ ನಡೆದ ಈ ಕಾರ್ಯಕ್ರಮದ ಸಮಾ ಕಲಾಪ ನಿರ್ವಹಣೆ ಡಾ। ಗಣೇಶ ಉಪಾಧ್ಯಾಯ ಅವರಿಂದಾಯಿತು.

ರಂಗನಾಥ ಶರ್ಮ, ಪ್ರೊ। ಎಸ್.ಕೆ. ರಾಮಚಂದ್ರ ರಾವ್‌ಗೆ ಏರ್ಯ ಪ್ರಶಸ್ತಿ

ಮಂಗಳೂರು: ಧಾರ್ಮಿಕ ಸಾಹಿತ್ಯದಲ್ಲಿ ವಿಶೇಷ ಸಾಧನೆಗೈದವರನ್ನು ಗುರುತಿಸಿ ರಾಜ್ಯಮಟ್ಟದ ಪ್ರಶಸ್ತಿಯನ್ನು ನೀಡಲು ಇಲ್ಲಿನ ಕೆನರಾ ಹೈಸ್ಕೂಲ್ ಅಸೋಸಿಯೇಶನ್ ಸ್ಥಾಪಿಸಿದ ಏರ್ಯ ಲಕ್ಷ್ಮೀ ನಾರಾಯಣ ಆಳ್ವ ದತ್ತಿ ನಿಧಿಯ ಪ್ರಥಮ ಪ್ರಶಸ್ತಿಗೆ ವಿದ್ವಾನ್ ರಂಗನಾಥ ಶರ್ಮ ಹಾಗೂ ನೈತಿಕ ಮೌಲ್ಯ ಪುನರುತ್ಥಾನ ಪ್ರಶಸ್ತಿಗೆ ಪ್ರೊ। ಎಸ್. ರಾಮಚಂದ್ರ ರಾವ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು 10 ಸಾವಿರ ರೂ. ನಗದು ಹಣ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ ಎಂದು ಅವರು ವಿವರಿಸಿದರು.

ಡಾ। ಜಿ.ಎನ್. ಭಟ್, ನೇತೃತ್ವದ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಪ್ರೊ। ಬಿ.ಎ. ಉಪಾಧ್ಯಾಯ (ಸಂಚಾಲಕ), ಪ್ರೊ। ನಾರಾಯಣ ಭಟ್ (ಇಂಗ್ಲಿಷ್ ವಿಭಾಗ), ಶ್ರೀ ಎಚ್. ರಮೇಶ್ ಕೆದಿಲಾಯ (ಅರ್ಥ ಶಾಸ್ತ್ರ), ಪ್ರೊ। ನಾಗರಾಜ ಜವಳಿ (ಕನ್ನಡ ವಿಭಾಗ) ಅವರಿದ್ದರು.

ರಂಗನಾಥ ಶರ್ಮರು ಬೆಂಗಳೂರಿನ ಜಯಚಾಮ ರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಕರಣ ಶಾಸ್ತ್ರ ಮತ್ತು ಅಲಂಕಾರ ಶಾಸ್ತ್ರದ ಪ್ರಾಧ್ಯಾಪಕರಾಗಿ 28 ವರ್ಷ ಸಲ್ಲಿಸಿ ನಿವೃತ್ತರಾದ ವಿದ್ವಾಂಸರು ಈಗಾಗಲೇ ವಿದ್ಯಾಲಂಕಾರ, ಶಾಸ್ತ್ರ ಚೂಡಾಮಣಿ, ಸಂಗೀತ ಕಲಾರತ್ನ ಮುಂತಾದ ಪ್ರಶಸ್ತಿಗಳನ್ನು ಪಡೆದು ಪ್ರೊ। ಸಾಲಿಗ್ರಾಮ ಕೃಷ್ಣ ರಾಮಚಂದ್ರ ರಾಯರು ಪ್ರಾಚೀನ ವಿದ್ವತ್ತಿನೊಂದಿಗೆ ಆಧುನಿಕ ಸಂಶೋಧನಾ ದೃಷ್ಟಿ ಹೊಂದಿದ ವಿದ್ವಾಂಸರು.

ಕೃಪೆ: ಉದಯವಾಣಿ

MATRIMONIAL

Alliance invited for Kannada Madhawa Bharadwaja gothra boy 41, 5'7'' well employed in Delhi. Girl should be well educated and preferably working from same sect.

Contact : Tel.: 022-724214 or write to Nesaru Box No. M/01

***

Alliance invited for Kannada Brahmin girl 24, 5'2'', Wardholisa gothram S.S.L.C. Diploma in Computer, Tailoring, Teachers, Training ectc. Boy should be graduate or Diploma holder settled in Bombay any South Indiab boy below 29 years.

Conact :

Tel. No.: 471 76 34

or write to Nesaru Box No. M/02

TRIMURTI
JEWELLERS
GOLD AND DIAMOND ORNAMENTS

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.) Mumbai-19.

Phone : **402 34 85**

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38